ANANTHKUMAR PRATISHTHANA

# ಅನಂತಪಥ

ಉಕ್ಕಿನ ಮನುಷ್ಯ
ಸರ್ದಾರ್ ಪಟೇಲ್
ವ್ಯಕ್ತಿ ವಿಶೇಷ ಪುಟ 6



ಸಂಪುಟ - 4 ಡಿಸೆಂಬರ್ - 2023 ಸಂಚಿಕೆ - 42

# ಸಭ್ಯ ರಾಜಕಾರಣದ ಅಪೂರ್ವ ಜೋಡಿ: ಅಟಲ್ - ಅನಂತ್

ಭಾರತದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಹಾಗೂ ಕೇಂದ್ರ ಸಚಿವ ಅನಂತಕುಮಾರ್ ನಡುವಣ ವ್ಯಾವಹಾರಿಕ ಸಂಬಂಧವೇ ಪ್ರಧಾನವಾಗಿ ಕಾಣುವುದರಿಂದ ಅವರ ನಡುವಣ ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಯ ಸಂಬಂಧದ ಮೇಲೆ ನಾವು ಅಷ್ಟಾಗಿ ಗಮನ ಹರಿಸುವುದಿಲ್ಲ. ಆಸಕ್ತಿ, ದೂರದೃಷ್ಟಿ, ಸಾಮಾಜಿಕ ಹೊಣೆಗಾರಿಕೆ, ನಾಯಕತ್ವ - ಹೀಗೆ ಅನೇಕ ವಿಚಾರಗಳಲ್ಲಿ ಅವರ ನಡುವೆ ಸಾಮ್ಯತೆಗಳಿದ್ದವು.

ಈ ಇಬ್ಬರು ನಾಯಕರ ಮಧ್ಯೆ ಸುಮಾರು 35 ವರ್ಷಗಳ ವಯಸ್ಸಿನ ಅಂತರವಿತ್ತು. (ಜನನ: ಅಟಲ್ 1924ರ ಡಿ. 25 ಹಾಗೂ ಅನಂತಕುಮಾರ್ 1959 ಸೆ.22) ದೇಶದ ಸ್ವಾತಂತ್ರ್ಯಪೂರ್ವ ಹಾಗೂ ನಂತರದ ಸ್ಥಿತಿಗತಿಗಳು ಅಟಲ್‌ರ ವ್ಯಕ್ತಿತ್ವವನ್ನು ರೂಪಿಸಿದ್ದರೆ, ಸ್ವಾತಂತ್ರ್ಯಾನಂತರದ ಸನ್ನಿವೇಶಗಳು ಅನಂತಕುಮಾರರ ಸಾಮಾಜಿಕ ಹೊಣೆಗಾರಿಕೆಯ ಆಲೋಚನೆಗಳಿಗೆ ಮೂರ್ತರೂಪ ನೀಡಿದ್ದವು. ಬದುಕಿನ ಪರಿಧಿಯ ಒಂದು ಬಿಂದುವಿನಲ್ಲಿ ಸಮಾನ ಆಸಕ್ತಿಗಳು ಸಂಧಿಸಿದ ಕ್ಷಣದಿಂದ ಅವರಿಬ್ಬರೂ ನಿರಂತರವಾಗಿ ಸಂಪರ್ಕದಲ್ಲಿದ್ದರು. “ರಾಜಕಾರಣದಲ್ಲಿ ಶಾಶ್ವತ ಮಿತ್ರನೂ ಇಲ್ಲ; ಶತ್ರುವೂ ಇಲ್ಲ” ಎಂಬ ವ್ಯವಸ್ಥೆಯಲ್ಲಿ ಸ್ನೇಹಪರ ಚಲನಶೀಲತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗಿದ್ದು ಅವರಿಬ್ಬರ ಸಮಾನಪಥ, ಸಮಾನ ಗುರಿ, ಸಮಾನ ಬದ್ಧತೆ ಹಾಗೂ ಸಮಾನ ಸ್ವಭಾವಗಳು.

ಇಂದಿರಾಗಾಂಧಿ ಹತ್ಯೆಯ ನಂತರ ನಡೆದ ೧೯೮೪ರ ಲೋಕಸಭಾ ಚುನಾವಣೆಯಲ್ಲಿ ಭಾರತೀಯ ಜನತಾಪಕ್ಷವು ಕೇವಲ ಎರಡೇ ಸ್ಥಾನ ಗಳಿಸಿ ಇನ್ನಿಲ್ಲದಂತೆ ನೆಲ ಕಚ್ಚಿತ್ತು. ಅಟಲ್‌ಜೀ ಕೂಡ ಸೋಲನ್ನು ಅನುಭವಿಸಿದ್ದರು. ಆ ಸಂದರ್ಭದಲ್ಲಿ ಶಿವಮೊಗ್ಗದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಅನಂತಕುಮಾರ್ ಮುಂದಿನ ಸಾಲಿನಲ್ಲಿ ಕುಳಿತಿದ್ದರು. ಅವರ ಮುಖದಲ್ಲಿ ಆತ್ಮವಿಶ್ವಾಸ ಮತ್ತು ಭರವಸೆಗಳನ್ನು ಗುರುತಿಸಿದ ಅಟಲ್, “ನ ದೈನ್ಯಂ, ನ ಪಲಾಯನಂ, ಇಂತಹ ನಿಷ್ಠಾವಂತ ಕಾರ್ಯಕರ್ತರು ಇರುವವರೆಗೆ ನಾನು ಪಲಾಯನ ಮಾಡುವುದಿಲ್ಲ” ಎಂದಿದ್ದರು. ಪುಟ 4 ರಲ್ಲಿ ಮುಂದುವರೆದಿದೆ



# "ಅಭಿವೃದ್ಧಿಯ ನೆಪದಲ್ಲಿ ನಿಸರ್ಗನಾಶ"




ಸೋಂದಾ ಸ್ವರ್ಣವಲ್ಲೀ ಮಠದ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿಗಳ ಪ್ರಕಾಶನದ ರಜತ ಮಹೋತ್ಸವ ಆಚರಣೆಯು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸೋಂದಾದಲ್ಲಿರುವ ಮಠದ ಸುಧರ್ಮಾ ಸಭಾಭವನದಲ್ಲಿ ಶನಿವಾರ (ನ. 25)ದಂದು ಜರುಗಿತು. ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ “ಸಂದೇಶ ಮಾಲಿಕಾ” ಕೃತಿಯನ್ನು ಬಿಡುಗಡೆ ಮಾಡುತ್ತ “ಅಭಿವೃದ್ಧಿಯ ನೆಪದಲ್ಲಿ ಮನುಷ್ಯನು ಪ್ರಕೃತಿಯ ಕೊಡುಗೆಗಳನ್ನು ನಾಶ ಮಾಡುತ್ತಿದ್ದಾನೆ. ಮನುಷ್ಯ ಅಭಿವೃದ್ದಿಯ ಹೆಸರಿನಲ್ಲಿ ಏನೆಲ್ಲ ಮಾಡಿರಬಹುದು. ಆದರೆ, ಪ್ರಕೃತಿಯ ಕೊಡುಗೆಯ ಶೇ. 1ರಷ್ಟೂ ಮಾಡಲು ಅವನಿಗೆ ಆಗಲಿಲ್ಲ. ಕಳೆದ 50ವರ್ಷಗಳಲ್ಲಿ ಪರಿಸರ ನಾಶವನ್ನು ಮಾಡುತ್ತಲೇ ಅಭಿವೃದ್ದಿಯತ್ತ ಸಾಗಿದ್ದೇವೆ. ನಮ್ಮ ಶಿಕ್ಷಣ 'ಬೇಡ ಬೇಡ' ಎಂದು ಹೇಳುವುದಕ್ಕಿಂತ ಹೆಚ್ಚಾಗಿ 'ಬೇಕು ಬೇಕು' ಎಂದು ಹೇಳುವಂತೆ ಮಾಡುತ್ತಿದೆ, ಈ ಕುರಿತು ಜಾಗೃತಿ ಮೂಡಿಸಬೇಕಿದೆ" ಎಂದು ಹೇಳಿದರು. “ಪುರಾಣಗಳು ಇತಿಹಾಸದ ಭಾಗವಾಗಿವೆ ಎಂಬುದಕ್ಕೆ ದಾಖಲೆಗಳು ಸಾಕಷ್ಟು ಸಿಗುತ್ತಿವೆ. ಈ ಕುರಿತು ಸಂಶೋಧನೆಗಳು ಹೆಚ್ಚಬೇಕು” ಎಂದೂ ಅವರು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ. ವಿಜಯ ಸಂಕೇಶ್ವರ ಅವರು ವಹಿಸಿದ್ದರು. “ಜಾತಿ-ಉಪಜಾತಿಗಳ ಗೊಡವೆ ಬಿಟ್ಟು ನಾವೆಲ್ಲರೂ ಸನಾತನಿಗಳು ಎಂಬ ಭಾವನೆ ಎಲ್ಲರಲ್ಲೂ ಮೂಡಬೇಕಾದ ಕಾಲ ಬಂದಿದೆ” ಎಂದು ಅವರು ಅಭಿಪ್ರಾಯಪಟ್ಟರು. 25 ವರ್ಷಗಳ ಹಿಂದೆ ಆರಂಭವಾದ ಪತ್ರಿಕೆ ಮತ್ತು ಪ್ರಕಾಶನಗಳು ಆತ್ಮಜಾಗೃತಿಯತ್ತ ಸಮಾಜವನ್ನು ಕೊಂಡೊಯ್ಯುವ ಉದ್ದೇಶವನ್ನು ಹೊಂದಿವೆ ಎಂದು ಸೋಂದಾ ಸ್ವರ್ಣವಲ್ಲೀ ಮಠದ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ಕುಲಪತಿ ಡಾ. ನಿರಂಜನ ವಾನಳ್ಳಿ ರಜತಪ್ರಭಾ ಕೃತಿಯನ್ನುಬಿಡುಗಡೆ ಮಾಡಿದರು. 'ಅಧ್ಯಾತ್ಮ ಪ್ರಕಾಶ'ದ ಉಪ ಸಂಪಾದಕ ಲಕ್ಷ್ಮೀಶ ಭಟ್, ಟಿ.ಎಂ. ಎಸ್. ಅಧ್ಯಕ್ಷ ಜಿ.ಎಂ. ಹೆಗಡೆ ಹುಳಗೋಳ, ಟಿಎಸ್‌ಎಸ್ ಸೊಸೈಟಿ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ, ಶ್ರೀ ಮಠದ ಅಧ್ಯಕ್ಷ ವಿ.ಎನ್. ಹೆಗಡೆ, ಬೊಮ್ಮನಳ್ಳಿ, ಕೆ.ವಿ. ಭಟ್ ಮೊದಲಾದವರು ಉಪಸ್ಥಿತರಿದ್ದರು.

# ಹೆಡತಲೆಯ ಲಕ್ಷ್ಮೀಕಾಂತ ದೇವಾಲಯ

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್




ಈ ಸಂಚಿಕೆಯಲ್ಲಿ ನಾವು ಪರಿಚಯಮಾಡಿಕೊಳ್ಳಲಿರುವ ದೇವಾಲಯ ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದಲ್ಲಿದೆ. ನಂಜನಗೂಡಿನಿಂದ ಹದಿನಾಲ್ಕು ಕಿಮೀ ದೂರದಲ್ಲಿರುವ ಹೆಡತಲೆ ಗ್ರಾಮವನ್ನು ಶಾಸನಗಳಲ್ಲಿ ಎಡತಲೆ, ಯಡತಲೆ ಎಂದೂ ಗುರುತಿಸಲಾಗಿದೆ. ಇಲ್ಲಿರುವ ಲಕ್ಷ್ಮೀಕಾಂತ ದೇಗುಲ ಮೂರು ಗರ್ಭಗುಡಿಗಳನ್ನು ಹೊಂದಿರುವ ತ್ರಿಕೂಟಾಚಲ ನಿರ್ಮಿತಿಯಾಗಿದೆ. ಹದಿಮೂರನೆಯ ಶತಮಾನದ ಪ್ರಸಿದ್ಧ ಹೊಯ್ಸಳ ಅರಸನಾಗಿದ್ದ ಮೂರನೆಯ ವೀರಬಲ್ಲಾಳನು ಅಧಿಕಾರಕ್ಕೆ ಬಂದ ಪ್ರಾರಂಭದಲ್ಲಿ (1292) ಈ ಗುಡಿಯನ್ನು ಕಟ್ಟಲಾಯಿತಂತೆ.

ಮಹಾವಿಷ್ಣು ತನ್ನ ನಾಲ್ಕು ಕೈಗಳಲ್ಲಿ ಶಂಖ-ಚಕ್ರ-ಗದಾ-ಪದ್ಮಗಳನ್ನು ಹಿಡಿದಿರುವ ಕ್ರಮಕ್ಕೆ ಅನುಗುಣವಾಗಿ ವಿಷ್ಣುವಿನ 24 ರೂಪಗಳನ್ನು ಗುರುತಿಸಲಾಗುತ್ತದೆ. ಈ ರೂಪಗಳಲ್ಲಿ ಲಕ್ಷ್ಮೀಕಾಂತ ಮೂರ್ತಿ ಸೇರುವುದಿಲ್ಲ. ಲಕ್ಷ್ಮೀಕಾಂತ ಮೂರ್ತಿಯು ಬಲ ಮೇಲುಗೈಯಲ್ಲಿ ಪದ್ಮವನ್ನೂ ಎಡಮೇಲುಗೈಯಲ್ಲಿ ಗದೆಯನ್ನೂ ಧರಿಸಿದ್ದು ಕೆಳಭಾಗದ ಕೈಗಳಲ್ಲಿ ಚಕ್ರ ಶಂಖಗಳನ್ನು ಧರಿಸಿರುತ್ತಾನೆ. ಕೆಳಗಿನ ಎರಡು ಕೈಗಳು ಮುಂದಕ್ಕೆ ಚಾಚಿದಂತಿರುವುದು ಲಕ್ಷ್ಮೀಕಾಂತ ವಿಷ್ಣುಮೂರ್ತಿಯ ವೈಶಿಷ್ಟ್ಯ.

ಹೆಡತಲೆಯ ಮುಖ್ಯ ಗರ್ಭಗುಡಿಯಲ್ಲಿ ಲಕ್ಷ್ಮೀಕಾಂತನಾದ ವಿಷ್ಣುವಿನ ಮೂರ್ತಿಯಿದೆ. ಲಕ್ಷ್ಮೀಕಾಂತ ಮೂರ್ತಿಯ ಅರೆಮುಚ್ಚಿದ ನೇತ್ರಗಳೂ ಮಂದಹಾಸವೂ ವಿಗ್ರಹಕ್ಕೆ ಅಪೂರ್ವ ಶೋಭೆಯನ್ನು ಕಲ್ಪಿಸಿವೆ. ಇನ್ನು ಎಡಭಾಗದ ಕೋಷ್ಠದಲ್ಲಿ ವೇಣುಗೋಪಾಲನ ವಿಗ್ರಹ. ವೇಣುಗೋಪಾಲನು ಕೊಳಲೂದುತ್ತ ತ್ರಿಭಂಗಿಯಲ್ಲಿ ನಿಂತಿದ್ದಾನೆ. ಇಕ್ಕೆಲಗಳಲ್ಲಿ ದೇವಿಯರಿದ್ದಾರೆ. ಕಾಲ ಬಳಿ ಕೊರಳೆತ್ತಿ ವೇಣುಗಾನವನ್ನು ಆಲಿಸುವ ಗೋವುಗಳು. ವಿಗ್ರಹದ ತಳಭಾಗದಲ್ಲಿ ಮಂಡಿಯೂರಿ ಕುಳಿತ ಗರುಡನನ್ನು ಚಿತ್ರಿಸಿದೆ. ಬಲಭಾಗದ ಗುಡಿಯಲ್ಲಿ ಲಕ್ಷ್ಮೀನರಸಿಂಹಸ್ವಾಮಿಯನ್ನು ಕಾಣಬಹುದು. ಸೌಮ್ಯ ರೂಪದ ನರಸಿಂಹನ ತೊಡೆಯ ಮೇಲೆ ಲಕ್ಷ್ಮೀದೇವಿ ಕುಳಿತಿದ್ದಾಳೆ. ಇವೆಲ್ಲ ಮೂರ್ತಿಗಳು ಹೊಯ್ಸಳಕಾಲದ ಅನುಪಮ ಶಿಲ್ಪಸೌಂದರ್ಯಕ್ಕೆ ಮಾದರಿಗಳಾಗಿವೆ. ನಡುಮಂಟಪದಲ್ಲಿ ಪುರಾತನಕಾಲದ ಕೇಶವನ ಶಿಲ್ಪವೊಂದಲ್ಲದೆ, ಇತ್ತೀಚಿಗೆ ಕೆತ್ತಲಾದ ಆಂಡಾಳ್ ದೇವಿಯ ಸುಂದರವಾದ ವಿಗ್ರಹವೊಂದಿದೆ.



ಹೆಡತಲೆ ದೇವಾಲಯದ ಇನ್ನೊಂದು ವೈಶಿಷ್ಟ್ಯವೆಂದರೆ, ಇಲ್ಲಿನ ಮುಖಮಂಟಪ. ಮೂರು ಬಾಗಿಲು, ಸುತ್ತ ಒರಗುಪೀಠ, ಹದಿನಾರು ಮೂಲೆಗಳ ವಿನ್ಯಾಸವುಳ್ಳ ಮಂಟಪ.

ಈ ಮಂಟಪಕ್ಕೆ ಸಂಬಂಧಿಸಿದ ಸ್ವಾರಸ್ಯಕರವಾದ ಕಥೆಯೊಂದಿದೆ. ಈಗಿನ ಮೈಸೂರು ಪ್ರಾಂತ್ಯದ ದಕ್ಷಿಣಕ್ಕೆ ಒಂದು ಚಿಕ್ಕ ರಾಜ್ಯ. ಇದನ್ನಾಳುತ್ತಿದ್ದ ರಾಜರಾಣಿಯರಿಗೆ ಹದಿನಾರು ಜನ ಹೆಣ್ಣುಮಕ್ಕಳು. ಎಲ್ಲ ರಾಜಕುಮಾರಿಯರನ್ನು ಪ್ರೀತಿಯಿಂದ ಬೆಳೆಸಿದ ರಾಜದಂಪತಿ ಎಲ್ಲರಿಗೂ ಮದುವೆಮಾಡಿ ಅವರವರ ಗಂಡಂದಿರ ಮನೆಗಳಿಗೆ ಕಳುಹಿಸಿಕೊಟ್ಟಿದ್ದರು. ಆರು ತಿಂಗಳಿಗೋ ವರುಷಕ್ಕೋ ಒಮ್ಮೆ ತಂದೆತಾಯಿಗೆ ಮಕ್ಕಳನ್ನು ನೋಡಬೇಕೆನಿಸಿದಾಗಲೆಲ್ಲ ಎಲ್ಲ ಹದಿನಾರು ರಾಜಕುಮಾರಿಯರೂ ತಂತಮ್ಮ ಗಂಡಂದಿರ ಜೊತೆಗೆ ತವರುಮನೆಗೆ ಬಂದು ಒಂದೆರಡು ದಿನವಿದ್ದು ಹೋಗಬೇಕು ಅಂತ ರಾಜ ನಿಬಂಧನೆ ವಿಧಿಸಿಬಿಟ್ಟಿದ್ದ. ಅದರಂತೆ ಎಲ್ಲ ಹದಿನಾರು ಹೆಣ್ಣುಮಕ್ಕಳೂ ಗಂಡಂದಿರೊಡನೆ ತವರಿಗೆ ಬಂದು ಸರಸಸಲ್ಲಾಪಗಳಿಂದ ರಾಜರಾಣಿಯರನ್ನು ಸಂತೋಷಪಡಿಸಿ ಅವರವರ ಊರಿನತ್ತ ಹಿಂತಿರುಗುವರು. ಅತ್ತೆಯಾದವಳು ಅಳಿಯಂದಿರ ಮುಖನೋಡಬಾರದು ಎನ್ನುವುದೊಂದು ಸಂಪ್ರದಾಯದ ನಿಯಮ. ಈ ರಾಜದಂಪತಿಗಳ ತುಂಬುಕುಟುಂಬದ ಸರಸಸಲ್ಲಾಪಕ್ಕೆ ಇದ್ದ ಪ್ರಮುಖ ಅಡಚಣೆಯೆಂದರೆ ಇದೇ. ಒಬ್ಬರಲ್ಲ, ಇಬ್ಬರಲ್ಲ, ಹದಿನಾರು ಜನ ಅಳಿಯಂದಿರು ಮನೆಗೆ ಬಂದಿರುವಾಗ ಅತ್ತೆಯಾದವಳು ಅವರ ಮುಖ ನೋಡದೆ ಯೋಗಕ್ಷೇಮದ ಮಾತನಾಡಿ ಕಳುಹಿಸುವುದಾದರೂ ಹೇಗೆ? ಈ ಸಮಸ್ಯೆಗೆ ರಾಜ ಪರಿಹಾರವೊಂದನ್ನು ಕಂಡುಕೊಂಡ. ಊರ ದೇವಾಲಯಕ್ಕೆ ಮುಖಮಂಟಪವೊಂದನ್ನು ಕಟ್ಟಿಸಿದ. ಈ ಮಂಟಪ ಹದಿನಾರು ಮೂಲೆಗಳುಳ್ಳ ವಿನ್ಯಾಸವನ್ನು ಹೊಂದಿತ್ತು. ಎಲ್ಲ ಮೂಲೆಗಳಲ್ಲೂ ಕುಳಿತುಕೊಳ್ಳಲು ಕಕ್ಷಾಸನ ಎಂದರೆ ಒರಗುಪೀಠಗಳಿರುವಂತೆ ವ್ಯವಸ್ಥೆ ಮಾಡಲಾಗಿತ್ತು. ಈ ಪೀಠಗಳಲ್ಲಿ ಒಂದೊಂದು ಮೂಲೆಯಲ್ಲಿ ಒಬ್ಬೊಬ್ಬ ರಾಜಕುಮಾರಿ ತನ್ನ ಗಂಡನೊಡನೆ ಕುಳಿತುಕೊಳ್ಳುತ್ತಿದ್ದಳು. ನಕ್ಷತ್ರಾಕಾರದ ಈ ಮಂಟಪಕ್ಕೆ ಮೂರು ದಿಕ್ಕುಗಳಿಂದ ಪ್ರವೇಶದ್ವಾರಗಳು. ಒಂದು ದಿಕ್ಕಿನ ಪ್ರವೇಶದ್ವಾರದೆಡೆಯಲ್ಲಿ ರಾಜರಾಣಿಯರಿಗೆ ಆಸನವ್ಯವಸ್ಥೆ. ಇಲ್ಲಿ ಕುಳಿತುಕೊಳ್ಳುವ ರಾಜನಿಗೆ ತನ್ನ ಎಲ್ಲ ಹೆಣ್ಣುಮಕ್ಕಳೂ ಅಳಿಯಂದಿರೂ ಸ್ಪಷ್ಟವಾಗಿ ಕಾಣಿಸುವರು. ಅವನ ಪಕ್ಕದಲ್ಲಿ ಕುಳಿತ ರಾಣಿಗೆ ತನ್ನ ಎಲ್ಲ ಹೆಣ್ಣುಮಕ್ಕಳೂ ಕಾಣಿಸುವರು. ಅವರವರ ಪಾರ್ಶ್ವದಲ್ಲಿ ಕುಳಿತ ಅಳಿಯನೊಬ್ಬನೂ ಕಾಣಿಸುವುದಿಲ್ಲ. ಹೆಡತಲೆಯ ದೇಗುಲದ ಅರ್ಚಕರಾದ ಶ್ರೀ ನಾರಾಯಣ್ ರವರು ಈ ಮಂಟಪದ ವಿನ್ಯಾಸಕೌಶಲವನ್ನು ಇನ್ನಷ್ಟು ಸ್ವಾರಸ್ಯಕರವಾಗಿ, ಅಷ್ಟೇ ಏಕೆ, ಅತ್ತೆಯ ಜಾಗದಲ್ಲೋ ಅಳಿಯನ ಜಾಗದಲ್ಲೋ ನಿಮ್ಮನ್ನು ಕೂರಿಸಿ ಪ್ರಾಯೋಗಿಕವಾಗಿಯೂ ಬಣ್ಣಿಸುತ್ತಾರೆ. ಈ ಮಂಟಪದ ಬೆಡಗಿಗೆ ನೀವೂ ಬೆರಗಾಗುತ್ತೀರಿ.ಈ ಹದಿನಾರು ಮುಖದ ಸೊಗಸಾದ ಮಂಟಪವನ್ನು ಕಟ್ಟಿಸಿದವನು ಭೀಮಣ್ಣನಾಯಕನೆಂಬ ಸಾಮಂತರಾಜ. ಹದಿನಾರುಮುಖದ ಚಾವಡಿಯೆಂದೇ ಪ್ರಸಿದ್ಧವಾದ ಈ ಮಂಟಪದಲ್ಲಿ ಹದಿಮೂರು ಭುವನೇಶ್ವರಿಗಳಿದ್ದು ಕಲಾತ್ಮಕ ವಿನ್ಯಾಸದಿಂದ ಗಮನಸೆಳೆಯುತ್ತವೆ.

**ಸೌಜನ್ಯ: ಆಕಾಶವಾಣಿ ಮೈಸೂರು**






**ಅನಂತಯಾನ ಅಧ್ಯಾಯ- 18**

**ನಿರೂಪಣೆ : ಟಿ.ಎಸ್. ಗೋಪಾಲ್**

# ವೃಕ್ಷವಿಹಾರದ ಸಂಭ್ರಮ



ಹುಬ್ಬಳ್ಳಿಗೆ ಮೊದಲು ಬರುವ ಕಾಲಕ್ಕೆ ಅನಂತಕುಮಾರ ತುಂಬ ಚಿಕ್ಕ ಹುಡುಗ. ಆ ಎಳೆಯ ವಯಸ್ಸಿನಲ್ಲಿ, ಮರಗಿಡಗಳಿಂದ ತುಂಬಿದ ಕಾಲೊನಿಯ ಉದ್ದಗಲಕ್ಕೂ ಸಡಗರದಿಂದ ಓಡಿಯಾಡುತ್ತಿದ್ದ ತನ್ನ ಓರಗೆಯ ಮಕ್ಕಳ ಆಟಪಾಟವನ್ನು ಬೆರಗುಗಣ್ಣುಗಳಿಂದ ದಿಟ್ಟಿಸುತ್ತ ನಿಂತಿರುತ್ತಿದ್ದ. ಆ ಮಕ್ಕಳು ತನ್ನಂತೆಯೇ ಕನ್ನಡ ಮಾತನಾಡುತ್ತಿದ್ದರು. ಆದರೆ, ಅದೊಂದು ವಿಭಿನ್ನ ಶೈಲಿಯ ಮಾತು. ಬೀಳುವುದನ್ನೂ ಏಳುವುದನ್ನೂ ಲೆಕ್ಕಿಸದ ಆ ಹುಡುಗರ ಓಡಾಟ, ಒರಟುವರ್ತನೆಗಳನ್ನು ಅವನು ಆವರೆಗೆ ಕಂಡವನಲ್ಲ. ಆದರೂ ಅವೆಲ್ಲ ಅವನಿಗೆ ಏನೋ ವಿಶೇಷವೆಂಬಂತೆ ತೋರಿರಲಿಕ್ಕಿಲ್ಲ. ಎಲ್ಲಕ್ಕಿಂತ ಅವನಿಗೆ ಅಚ್ಚರಿಯುಂಟುಮಾಡಿದ ವಿಷಯವೆಂದರೆ, ಆ ಮಕ್ಕಳೆಲ್ಲ ನೆಲದ ಮೇಲೆ ಓಡಾಡುವಷ್ಟೇ ಸಹಜವಾಗಿ ಪುಟಪುಟನೆ ಮರವೇರಿ ಕೊಂಬೆಯಿಂದ ಕೊಂಬೆಗೆ ಜಿಗಿಯುತ್ತಿದ್ದ ಪರಿ. ಅವರೆಲ್ಲ ಹೆಚ್ಚುಹೊತ್ತು ಮರಗಳ ಮೇಲೆಯೇ ಇರುವುದೇಕೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಅನಂತ ತಾನೂ ಅವರೊಡನೆ ಸಕ್ರಿಯ ಪಾತ್ರಧಾರಿಯಾಗುವವರೆಗೆ ಕಾಯಬೇಕಾಯಿತು.

ಕಾಲೊನಿಯ ಮಕ್ಕಳ ವೃಕ್ಷಪ್ರೇಮದ ಅತಿಮುಖ್ಯ ಉದ್ದೇಶವೆಂದರೆ ಆತ್ಮರಕ್ಷಣೆಯೇ. ತಮ್ಮ ಮಕ್ಕಳ ಚೇಷ್ಟೆಯನ್ನು ಪೋಷಕರು ಎಷ್ಟೆಂದು ತಡೆದಾರು? ತಾಳ್ಮೆ ಮೀರಿ ತಂದೆಯೋ ತಾಯಿಯೋ ಅವರನ್ನು ಶಿಕ್ಷಿಸಲು ಮುಂದಾಗುವಷ್ಟರಲ್ಲಿ ಮಕ್ಕಳು ಓಡಿ ಹೋಗಿ ಸಮೀಪದ ಮರವೇರಿ ಕುಳಿತುಬಿಡುವರು. ಅಮ್ಮನಂತೂ ಮರ ಹತ್ತುವುದಿಲ್ಲ. ತಂದೆಗೂ ವೃಕ್ಷಾರೋಹಣ ವಿದ್ಯೆ ಗೊತ್ತಿರಲಿಕ್ಕಿಲ್ಲ; ಗೊತ್ತಿದ್ದರೂ ಆ ಕೌಶಲಪ್ರದರ್ಶನಕ್ಕೆ ಹೊರಟು ತಾನೇ ಪ್ರದರ್ಶನದ ವಸ್ತುವಾಗಲು ಯಾವ ತಂದೆಯೂ ಬಯಸಲಾರ. ಹೀಗಾಗಿ ಕಾಲೊನಿಯ ಹುಡುಗರಿಗೆಲ್ಲ ಆಸುಪಾಸಿನ ಮರಗಳು ನಿಜಾರ್ಥದಲ್ಲಿ 'ಅಭಯಾರಣ್ಯ'ವಾಗಿದ್ದವು. ಪೋಷಕರ ಕೋಪವಿಳಿದಿರುವುದು ದೃಢಪಡುವವರೆಗೂ ಅವರು ಮರದ ಮೇಲೆಯೇ ಕುಳಿತಿರಲು ಯಾವ ಅಭ್ಯಂತರವೂ ಇರಲಿಲ್ಲ. ಬೇಸರ ಕಳೆಯುವುದಕ್ಕೆ ಜೊತೆಗಾರರಿಗೂ ಕೊರತೆಯಿರಲಿಲ್ಲ. ಇಂಥ ವಾನರಸೇನೆಯನ್ನು ಕಾಲೊನಿಯ ಮರಗಳ ಮೇಲೆ ಯಾವಾಗಲೂ ಕಾಣಬಹುದಿತ್ತು.

ಕಾಲೊನಿಯಲ್ಲಿದ್ದ ಮರಗಳಲ್ಲಿ ಬಹುತೇಕ ಹಣ್ಣುಬಿಡುವ ಮರಗಳು. ಹಲಸು, ಹುಣಿಸೆ, ಮಾವು, ಚಿಕ್ಕು (ಸಪೋಟ), ಪೇರಲ ಮುಂತಾದವು. ಪ್ರತಿ ಮನೆಯ ಮುಂದೂ ಇಂಥ ಗಿಡಮರಗಳು ಒಂದೆರಡಾದರೂ ಕಾಣಲೇಬೇಕು. ಈ ಮರಗಳನ್ನೇರಿ ಕಾಯಿ, ಹಣ್ಣುಗಳ ಸಮೀಕ್ಷೆಗೆ ಕುಳಿತ ಮಕ್ಕಳು ಆಯಾ ಮರದ ಒಡೆತನವಿದ್ದ ಮನೆಯ ಮಕ್ಕಳೇ ಆಗಬೇಕೆಂದಿಲ್ಲ. ಹಾಗೆ ನೋಡಿದರೆ, ತಂತಮ್ಮ ಮನೆಯ ಮರದ ಹಣ್ಣುಕಾಯಿಗಳ ಬಗೆಗೆ ಮಕ್ಕಳಿಗಿದ್ದ ಪ್ರೀತಿ ಅಷ್ಟಕ್ಕಷ್ಟೇ. ತಮ್ಮ ಗಿಡದಲ್ಲಿ ಬಿಟ್ಟ ಪೇರಲಕಾಯಿಗಿಂತ ಇನ್ನೊಬ್ಬರ ಮನೆಯ ಗಿಡದ ಕಾಯಿಯೇ ಯಾವಾಗಲೂ ಸವಿಯಾಗಿ ತೋರುವುದು. ಹೀಗೆ ಫಲಸಮೀಕ್ಷೆಯ ಕಾರಣದಿಂದಲೂ ಮಕ್ಕಳು ಕಾಲೊನಿಯ ಬಗೆಬಗೆಯ ಗಿಡಮರಗಳಲ್ಲಿ ಕಾರ್ಯತತ್ಪರರಾಗಿರುತ್ತಿದ್ದರು.

ಈ ಗಿಡಮರಗಳೆಲ್ಲ ಮಕ್ಕಳ ಆಕರ್ಷಣೆಯ ಸಾಧನವಾಗಿರಲು ಇನ್ನೊಂದು ಮುಖ್ಯಕಾರಣವೆಂದರೆ ಗಿಡಮಂಗ್ಯಾನ ಆಟ. ಮರಕೋತಿಯಾಟವೆಂದೂ ಕರೆಯಲಾಗುವ ಈ ಆಟಕ್ಕೆ ಕೇಂದ್ರ ಮೈದಾನವಲ್ಲ, ಮರವೇ. ಮರವೇರಿ ಕುಳಿತ ಮಕ್ಕಳನ್ನು ಹಿಡಿಯಲು ನೆಲದ ಮೇಲಿದ್ದವನು ಯತ್ನಿಸತಕ್ಕದ್ದು. ಮರವೇರುವುದೇ ಕಾಲೊನಿಯ ಮಕ್ಕಳ ಹುಟ್ಟುಗುಣವಾಗಿರುವಾಗ ಕೆಳಗಿದ್ದವನ ಕೈಗೆ ಆಟಗಾರರು ಸಿಕ್ಕಿಬೀಳುವ ಸಾಧ್ಯತೆಯೂ ಕಡಿಮೆಯೇ ಇರಬೇಕು. ಅನಂತಕುಮಾರನಿಗೆ ಬಾಲ್ಯದಲ್ಲಿ ಅತಿಪ್ರಿಯವೆನಿಸಿದ್ದ ಆಟ ಮರಕೋತಿಯಾಟವೇ.

ಅನಂತಕುಮಾರನಾಗಲಿ ಮಕ್ಬೂಲ್ ಪಟೇಲನಾಗಲಿ ಚೇಷ್ಟೆ, ಹುಡುಗಾಟಿಕೆಗಳಲ್ಲಿ ಪ್ರವೀಣರಾಗಿದ್ದವರಲ್ಲ. ಉಳಿದ ಮಕ್ಕಳಂತೆ ಮರಕ್ಕೆ ಕಲ್ಲೆಸೆದು ಗುರಿಸಾಧಿಸುವ ಪ್ರವೃತ್ತಿಯವರೂ ಅಲ್ಲ. ಇವರ ಸಾಹಸಗಳೆಲ್ಲ ಸಾಧಾರಣ ತುಂಟತನ ಮೀರಿ ಮುಂದುವರಿಯುತ್ತಿರಲಿಲ್ಲ. ಇವರ ಕಾಲೊನಿಯ ಮುಂದಕ್ಕೆ ರಸ್ತೆಯ ಬದಿಯಲ್ಲಿ ಒಂದು ನಾಲೆ. ನಾಲೆಯ ಆಚೆಗೆ ಮಾವಿನ ತೋಪು. ಅಲ್ಲಿನ ಮರಗಳಲ್ಲಿ ತೂಗಿದ ಮಾವಿನ ಫಸಲು ಈ ಮಕ್ಕಳನ್ನು ಆಕರ್ಷಿಸಿದ್ದು ಸಹಜವೇ. ನಾಲೆ ದಾಟಿ ಮಾವಿನ ತೋಪಿಗೆ ನುಗ್ಗಿದ ಈ ಹುಡುಗರು ತುಂಟತನದ ಚೇಷ್ಟೆಯಲ್ಲಿ ಚಾಣಾಕ್ಷರಲ್ಲದ ಕಾರಣ ಸುಲಭವಾಗಿ ಒಡೆಯನ ಕೈಗೆ ಸಿಕ್ಕಿಬಿದ್ದರು. ಮಾವಿನ ಕಳ್ಳರ ಕಾಟದಿಂದ ರೋಸಿಹೋಗಿದ್ದ ಅವನು ಈ ಪಾಪದ ಹುಡುಗರ ಕೈಕಟ್ಟಿ ಒಂದು ಮೂಲೆಯಲ್ಲಿ ಕೂರಿಸಿದ್ದ. ಮಕ್ಬೂಲನ ತಾಯಿಯೇ ಹೋಗಿ ಈ ಮಕ್ಕಳನ್ನು ಬಿಡಿಸಿಕೊಂಡು ಬರಬೇಕಾಯಿತು. ಹುಡುಗರು ಬಂಧನಕ್ಕೆ ಸಿಲುಕಿದ್ದೇ ವಿಶೇಷ, ಇವರ ದುರದೃಷ್ಟಕ್ಕೆ ಮೊದಲ ಸಾಹಸವೇ ಕೊನೆಯದೂ ಆಯಿತು; ಒಂದು ಮಾವಿನ ಕಾಯಿಯೂ ಸಿಕ್ಕಲಿಲ್ಲ.

ಇನ್ನು ಕಾಲೊನಿಯ ಮಕ್ಕಳಿಗೆ ಪ್ರಿಯವಾಗಿದ್ದ ಇನ್ನೊಂದು ಆಟ ಕಣ್ಣಾಮುಚ್ಚಾಲೆಯಂಥದು; ಅಡಗಿ ಕುಳಿತ ಮಕ್ಕಳನ್ನು ಹುಡುಕಿ ಪತ್ತೆಹಚ್ಚುವ ಆಟ. ಪತ್ತೆಹಚ್ಚಬೇಕಾದವನು ಮೊದಲಿಗೆ ಮುಖಮುಚ್ಚಿಕೊಂಡು ಒಂದರಿಂದ ಐವತ್ತೋ ನೂರೋ ಎಣಿಸಿ ಮುಗಿಸುವ ಹೊತ್ತಿಗೆ ಮಕ್ಕಳೆಲ್ಲ ಎಲ್ಲೆಲ್ಲೋ ಅಡಗಿಕೊಂಡುಬಿಟ್ಟಿರುವರು. ಮಕ್ಕಳು ಸಾಮಾನ್ಯವಾಗಿ ಎಲ್ಲಿ ಅಡಗಿರಬಹುದೆಂಬ ಗುಟ್ಟು ಪತ್ತೇದಾರನಿಗೂ ಗೊತ್ತಿರಲೇಬೇಕಷ್ಟೇ. ದೂರದಲ್ಲೆಲ್ಲೋ ಅನಂತಕುಮಾರನ ಬಿಳಿಯ ಅಂಗಿ ಕಾಣಿಸುವುದು. ಕೂಡಲೇ ಇವನಿಗೆ ಗೆದ್ದ ಉತ್ಸಾಹ ಮೂಡುವುದು. ಅನಂತನ ಹೆಸರು ಕೂಗಿ ಕರೆದು ಅವನನ್ನು ಪತ್ತೆಹಚ್ಚಿರುವುದಾಗಿ ಘೋಷಿಸುವನು. ಆದರೆ, ಎಷ್ಟೋ ಸಲ ಪತ್ತೇದಾರನಿಗೆ ಮುಖಭಂಗವಾಗಿಬಿಡುವುದು. ಅವನು ಅನಂತಕುಮಾರ ಎಂದು ಭ್ರಮಿಸಿದ ಬಿಳಿಯ ಶರಟಿನ ಹುಡುಗ ಬೇರೆ ಯಾರೋ ಆಗಿರುತ್ತಿದ್ದ. ಮತ್ತೆಲ್ಲಿಂದಲೋ ಅನಂತ ಕೆಂಪು ಶರಟಿನಲ್ಲಿ ಕಾಣಿಸಿಕೊಂಡು ಏಕೆ, ಏನಾಯಿತು ಎಂದು ಕೇಳುತ್ತಿದ್ದ. ಈ ಹುಡುಗನಿಗೆ ತನ್ನ ಎಣಿಕೆ ತಪ್ಪಾದುದೆಲ್ಲಿ ಎಂದು ಎಷ್ಟು ಯೋಚಿಸಿದರೂ ಗೊತ್ತಾಗುತ್ತಿರಲಿಲ್ಲ. ತಾನು ಒಂದರಿಂದ ಐವತ್ತು ಎಣಿಸುವುದರೊಳಗೆ ಅನಂತಕುಮಾರ ಚಾಕಚಕ್ಯತೆಯಿಂದ ತನ್ನ ಬಿಳಿಯ ಶರಟನ್ನು ಬಿಚ್ಚಿ ಇನ್ನೊಬ್ಬನಿಗೆ ಕೊಟ್ಟು ಅವನ ಕೆಂಪು ಅಂಗಿಯನ್ನು ತಾನು ತೊಟ್ಟು ವೇಷಮರೆಸಿಕೊಂಡಿರಬಹುದೆಂದು ಆ ಹುಡುಗನಿಗೆ ತಿಳಿಯುವುದಾದರೂ ಹೇಗೆ? ಅನೇಕ ವರುಷಗಳವರೆಗೂ ಕಾಲೊನಿಯಲ್ಲಿ ಹುಡುಗರ ಪಟಾಲಂ ಸಾಕಷ್ಟು ದೊಡ್ಡದಾಗೇ ಇತ್ತು. ಆ ಗುಂಪಿಗೆ ಅನಂತಕುಮಾರನೇ ಪುಟ 4 ರಲ್ಲಿ ಮುಂದುವರಿದಿದೆ

# ಗೀತೆಯ ಸಂದೇಶ



**ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ ಗುಹ್ಯತರಂ ಮಯಾ |**
**ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು || ೧೮. ೬೩ ||**

**ಇತಿ** – ಈ ರೀತಿಯಾಗಿ; **ತೇ** – ನಿನಗೆ; **ಜ್ಞಾನಮ್** - ಜ್ಞಾನವು; **ಆಖ್ಯಾತಂ** – ಹೇಳಲ್ಪಟ್ಟಿದೆ. **ಗುಹ್ಯಾತ್** – ರಹಸ್ಯಕ್ಕಿಂತ; **ಗುಹ್ಯತರಂ** – ರಹಸ್ಯವಾದ; **ಮಯಾ** – ನನ್ನಿಂದ; **ವಿಮೃಶ್ಯ** – ಯೋಚಿಸಿ; **ಏತತ್** = ಇದನ್ನು; **ಅಶೇಷೇಣ** – ಸಂಪೂರ್ಣವಾಗಿ, ಬಾಕಿಯಿಲ್ಲದಂತೆ; **ಯಥಾ** – ಹೇಗೆ; **ಇಚ್ಛಸಿ** – ಬಯಸುತ್ತೀಯೋ; **ತಥಾ** – ಹಾಗೆ; **ಕುರು** – ಮಾಡು.

ಈ ರೀತಿಯಾಗಿ ನಿನಗೆ ಅತ್ಯಂತ ರಹಸ್ಯವಾದ ಜ್ಞಾನವನ್ನು ನೀಡಿದ್ದೇನೆ. ಇನ್ನು ನೀನು ಒಂದಿಷ್ಟೂ ಬಿಡದಂತೆ ಯೋಚನೆ ಮಾಡಿ ನಂತರ ನಿನ್ನ ಮನಸ್ಸಿಗೆ ಬಂದಂತೆ ಮಾಡು.

ಇಲ್ಲಿ ಕೃಷ್ಣನು ಅರ್ಜುನನಿಗೆ ಸ್ವಾತಂತ್ರ್ಯವನ್ನು ಕೊಟ್ಟಹಾಗೆ ಕಾಣಿಸುತ್ತದೆ. ಆದರೆ ಇದಕ್ಕೆ ಮೊದಲು ಕರ್ಮದಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ, ಯುದ್ಧ ನಿನಗೆ ಅನಿವಾರ್ಯ ಎಂದು ಹೇಳಿದ್ದನ್ನು ನೆನಪಿಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಬದುಕಿನ ರಹಸ್ಯದ ಬಗ್ಗೆ ಅರಿಯದವರಿಗೆ ತಿಳಿಸಿ ಹೇಳುವುದು ಪ್ರತಿಯೊಬ್ಬನ ಕರ್ತವ್ಯ; ನಮ್ಮ ಮಾತನ್ನು ಪಾಲಿಸಲಿ, ಬಿಡಲಿ, ಒಳಿತು ಕೆಡುಕುಗಳ ಬಗ್ಗೆ ಅರಿವನ್ನು ನೀಡುವುದು ನಮ್ಮ ಕರ್ತವ್ಯ, ಕೇಳುವವರಿಲ್ಲವೆಂದು ಹೇಳುವುದನ್ನು ನಿಲ್ಲಿಸಬೇಡಿ ಎಂಬ ಪರೋಕ್ಷ ಸಂದೇಶವನ್ನು ಕೃಷ್ಣ ಭಕ್ತರೆಲ್ಲರಿಗೂ ಸಂದೇಶ ನೀಡುತ್ತಿದ್ದಾನೆ.

ಪುಟ 1 ರಿಂದ

## ಅಪೂರ್ವ ಜೋಡಿ: ಅಟಲ್ - ಅನಂತ್

ಅನಂತಕುಮಾರರು ಎಬಿವಿಪಿಯ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ದೆಹಲಿಯಲ್ಲಿ ೧೯೮೫ರಲ್ಲಿ ನಡೆದ ಎಬಿವಿಪಿ ರಾಷ್ಟ್ರೀಯ ಅಧಿವೇಶನದಲ್ಲಿ ಮೊದಲ ಬಾರಿಗೆ ಅಟಲ್‌ರನ್ನು ಭೇಟಿಯಾದರು. ಅದರ ನಂತರ ವರ್ಷಕ್ಕೆ ಒಂದೆರಡು ಸಲವಾದರೂ ಅಟಲ್ ಅವರಿಗಾಗಿ ಕರ್ನಾಟಕದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದರು. ಭಾರತೀಯ ಸಂಸ್ಕೃತಿ, ಪರಂಪರೆಯನ್ನು ದೇಶವು ಮರಳಿ ಪಡೆಯಬೇಕು, ಪ್ರತಿಯೊಬ್ಬ ಪ್ರಜೆಯೂ ದೇಶದ ಸಮಗ್ರ ಅಭಿವೃದ್ಧಿಗೆ ಕಂಕಣಬದ್ಧನಾಗಿರಬೇಕು ಎಂಬುದು ಅವರಿಬ್ಬರ ಸಮಾನ ಆಶಯವಾಗಿತ್ತು. ಅನಂತಕುಮಾರರು ಹೇಳುವ ''ದೇಶ ಮೊದಲು, ಪಕ್ಷ ನಂತರ ಹಾಗೂ ವ್ಯಕ್ತಿ ಕೊನೆ'' ಎಂಬ ಮಾತಿಗೆ ವಾಜಪೇಯಿ ಅವರ ಪ್ರಾಮಾಣಿಕ ವ್ಯಕ್ತಿತ್ವದ ಪ್ರಭಾವವೇ ಕಾರಣ ಎಂದು ಹೇಳಬಹುದು. ವಾಜಪೇಯಿ ಮತ್ತು ಅನಂತಕುಮಾರರಿಬ್ಬರೂ ಕವಿಹೃದಯಿಗಳಾಗಿದ್ದರು. ಇಬ್ಬರಲ್ಲೂ ಹಾಸ್ಯಪ್ರಜ್ಞೆ ಇತ್ತು. ಇಬ್ಬರಿಗೂ ಸಾಹಿತ್ಯದ ಅಭಿರುಚಿಯಿತ್ತು. ಮೇಲ್ನೋಟಕ್ಕೆ ಗಂಭೀರ ಸ್ವಭಾವದವರಂತೆ ಕಾಣಿಸಿದರೂ ಮಾತನಾಡಿಸಿದಾಗ ಸ್ನೇಹಪರತೆಯನ್ನು ಇಬ್ಬರಲ್ಲೂ ಕಾಣಬಹುದಿತ್ತು. ಇಬ್ಬರೂ ಎಂದಿಗೂ ಕ್ಷುಲ್ಲಕ ರಾಜಕಾರಣ ಮಾಡಲಿಲ್ಲ. ಇಬ್ಬರೂ ಸಭ್ಯ, ಗೌರವಪೂರ್ಣ ರಾಜಕಾರಣದ ಮಾದರಿಯನ್ನು ಒದಗಿಸಿದರು.

೧೯೮೮ರಲ್ಲಿ ಅನಂತಕುಮಾರ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಆ ಅವಧಿಯಲ್ಲಿ ವರ್ಷಕ್ಕೆ ಎರಡು ಬಾರಿಯಾದರೂ ಕರ್ನಾಟಕಕ್ಕೆ ಭೇಟಿ ನೀಡುತ್ತಿದ್ದ ವಾಜಪೇಯಿಯವರ ಕಾರ್ಯಕ್ರಮಗಳ ಸಂಯೋಜನೆ ಮತ್ತು ಅವರ ಹಿಂದಿ ಭಾಷಣಗಳ ಅನುವಾದದ ಜವಾಬ್ದಾರಿಯನ್ನು ಅನಂತಕುಮಾರ್ ಯಶಸ್ವಿಯಾಗಿ ನಿರ್ವಹಿಸಿದರು. ಹಿಂದಿ ಭಾಷೆಯ ಮೇಲೆ ಅನಂತಕುಮಾರರಿಗಿದ್ದ ಪ್ರಭುತ್ವವನ್ನು ಗಮನಿಸಿದ ವಾಜಪೇಯಿಯವರು ಕರ್ನಾಟಕಕ್ಕೆ ನೀಡಬೇಕಾದ ಸಂದೇಶಗಳನ್ನು ಅವರ ಮೂಲಕವೇ ಕಳಿಸುತ್ತಿದ್ದರು. ಅನಂತಕುಮಾರರು (1996) ಮೊದಲ ಬಾರಿಗೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಆಯ್ಕೆಯಾದರು. 1998ರ ಚುನಾವಣೆಯಲ್ಲಿ ಆರಿಸಿಬಂದ ಅನಂತಕುಮಾರರನ್ನು ಸಚಿವ ಸಂಪುಟದ ಸದಸ್ಯರನ್ನಾಗಿ ವಾಜಪೇಯಿ ಆಯ್ಕೆ ಮಾಡಿಕೊಂಡಾಗ ಎಲ್ಲರಿಗೂ ಅಚ್ಚರಿಯಾಗಿತ್ತು. ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿ ಮನೆಗೆ ಬಂದು ಮಲಗಿದ್ದ ಅನಂತಕುಮಾರರಿಗೆ ಪ್ರಮೋದ್ ಮಹಾಜನ್ ಕರೆ ಮಾಡಿ ಅಟಲ್‌ರನ್ನು ಭೇಟಿ ಮಾಡಿ ಆಶೀರ್ವಾದ ಪಡೆದುಕೋ, ನಿನಗೆ ಬೇಕಾದ ಮಂತ್ರಿಪದವಿ ನೀಡುವಂತೆಯೇ ಕೇಳಿಕೋ ಎಂದು ಸಲಹೆ ನೀಡಿದರು. ಜೊತೆಗೆ ತಮ್ಮ ಕಾರನ್ನೂ, ಒಂದು ಸಿಹಿತಿಂಡಿಯ ಪೊಟ್ಟಣವನ್ನೂ ಪುಷ್ಪಗುಚ್ಛವನ್ನೂ ಕಳಿಸಿಕೊಟ್ಟರು. ಅನಂತಕುಮಾರರಿಗೆ ಇಂತಹ ರಿವಾಜುಗಳು ಅಪರಿಚಿತವಾಗಿದ್ದವು. ಇದರ ಹಿಂದೆ ಪ್ರಮೋದ್ ಮಹಾಜನ್ ಕೈವಾಡ ಇರುವುದನ್ನು ಅನಂತಕುಮಾರರಿಂದಲೇ ಕೇಳಿ ತಿಳಿದ ವಾಜಪೇಯಿ ನಸುನಕ್ಕು ಬಳಿಯಲ್ಲಿದ್ದ ವಿಮಾನವೊಂದರ ಪ್ರತಿಕೃತಿಯನ್ನು ಸಾಂಕೇತಿಕವಾಗಿ ನೀಡಿದರು. ಮರುದಿನದ ಪತ್ರಿಕೆಗಳಲ್ಲಿ ಅನಂತಕುಮಾರರು ವಿಮಾನಯಾನ ಖಾತೆಯ ಸಚಿವರಾಗಿ ಆಯ್ಕೆಯಾದ ಸುದ್ದಿ ಪ್ರಕಟವಾಗಿತ್ತು.

ರಾಜ್ಯದಲ್ಲಿ ಎಸ್ ಎಂ ಕೃಷ್ಣ ನೇತೃತ್ವದ ಕಾಂಗ್ರೆಸ್ ಸರಕಾರವಿದ್ದಾಗ ಕೇಂದ್ರದಲ್ಲಿ ಭಾಜಪ ಅಧಿಕಾರದಲ್ಲಿತ್ತು. ಸರಕಾರದಲ್ಲಿ ತಮಿಳುನಾಡಿನ ಅಣ್ಣಾ ಡಿಎಂಕೆ ಪಕ್ಷವೂ ಭಾಗಿಯಾಗಿತ್ತು. ಇಂತಹ ಸಂದರ್ಭದಲ್ಲಿ ಕಾವೇರಿ ವಿವಾದ ಭುಗಿಲೆದ್ದಿತು. ಎಲ್ಲಿ ಜಯಲಲಿತಾರ ಒತ್ತಡ ತಂತ್ರಕ್ಕೆ ಕೇಂದ್ರ ಸರಕಾರ ಬಲಿಯಾಗುವುದೋ ಎಂಬ ಆತಂಕವಿತ್ತು. ಆದರೆ, ಅನಂತಕುಮಾರರು ವಾಜಪೇಯಿಯವರ ಜೊತೆ ತಮಗಿದ್ದ ಆತ್ಮೀಯ ಸಂಬಂಧವನ್ನು ಬಳಸಿ ಕೇಂದ್ರ ಸರಕಾರದ ನಿರ್ಧಾರಗಳು ಕರ್ನಾಟಕದ ಪರವಾಗಿರುವಂತೆ ನೋಡಿಕೊಂಡರು.

ಅನಂತಕುಮಾರ್ ಮತ್ತು ವಾಜಪೇಯಿಯವರ ನಡುವೆ ಕೌಟುಂಬಿಕ ನೆಲೆಯಲ್ಲಿಯೂ ಸಂಬಂಧವಿತ್ತು. ವಾಜಪೇಯಿಯವರ ಕುಟುಂಬದ ಎಲ್ಲ ಸದಸ್ಯರ ಜೊತೆಗೂ ಅನಂತಕುಮಾರರು ಆತ್ಮೀಯ ಸಂಬಂಧವನ್ನು ಹೊಂದಿದ್ದರು. ಅದೇರೀತಿ, ವಾಜಪೇಯಿ ಕೂಡ ಅನಂತ್ ಕುಟುಂಬದ ಜೊತೆಗೆ ಆತ್ಮೀಯ ಸಂಬಂಧವನ್ನು ಹೊಂದಿದ್ದರು. ಬೆಂಗಳೂರು ಎಚ್‌ಎಎಲ್ ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಉದ್ಘಾಟನೆಗೆ ಬಂದಿದ್ದ ವಾಜಪೇಯಿಯವರು ತೇಜಸ್ವಿನಿಯವರನ್ನು ಕರೆಯಿಸಿಕೊಂಡು ಮಕ್ಕಳ ಆರೋಗ್ಯವನ್ನು ವಿಚಾರಿಸಿಕೊಂಡಿದ್ದರು.

ಕಾರ್ಯಕರ್ತರ ಜೊತೆ ಸಹಜವಾಗಿರುತ್ತಿದ್ದ ಅನಂತಕುಮಾರ್ ಅವರ ಮನೆಯಲ್ಲಿ ಸಂತೋಷದಿಂದ ಊಟ ಮಾಡುತ್ತಿದ್ದರು, ವಾಜಪೇಯಿ ಕೂಡ ಇದೇ ರೀತಿಯ ಅನೌಪಚಾರಿಕತೆಯ ಸ್ವಭಾವವನ್ನು ಹೊಂದಿದ್ದರು. ಇದರಿಂದಾಗಿ ಸೋಲಿನಿಂದ ಧೃತಿಗೆಟ್ಟಿದ್ದ ಕಾರ್ಯಕರ್ತರಲ್ಲಿ ಆತ್ಮವಿಶ್ವಾಸವನ್ನು ತುಂಬುವುದು ಸಾಧ್ಯವಾಗುತ್ತಿತ್ತು. ವಾಜಪೇಯಿ ಮತ್ತು ಅನಂತಕುಮಾರರು ದೊಡ್ಡಬಳ್ಳಾಪುರದ ತಮ್ಮ ಮನೆಗೆ ಭೇಟಿನೀಡಿದ ಪ್ರಸಂಗವನ್ನು ಕೇಂದ್ರ ರೇಷ್ಮೆ ಮಂಡಳಿಯ ಮಾಜಿ ಅಧ್ಯಕ್ಷರಾದ ಶ್ರೀ ಹನುಮಂತರಾಯಪ್ಪ ನೆನಪಿಸಿಕೊಳ್ಳುತ್ತಾರೆ.

ಅನಂತಕುಮಾರರು ವಾಜಪೇಯಿಯವರನ್ನು ಪಿತೃಸಮಾನ ಎಂದು ತಿಳಿದಿದ್ದರು. 2018ರ ಆಗಸ್ಟ್ 15ರಂದು ಅಟಲ್ ಅವರನ್ನು ಭೇಟಿಯಾಗಿದ್ದರು. ನಂತರ ಅದೇ ರಾತ್ರಿ ಅವರು ಬೆಂಗಳೂರಿಗೆ ಬಂದು ಮರುದಿನ ಬೆಳಿಗ್ಗೆ (2018ರ ಆಗಸ್ಟ್ 16 ) ಅನಂತಕುಮಾರರು ಆಸ್ಪತ್ರೆಗೆ ದಾಖಲಾಗಬೇಕಿತ್ತು. ಆದರೆ ಅಟಲ್‌ರ ನಿಧನದ ಸುದ್ದಿ ತಿಳಿದ ತಕ್ಷಣ ಅವರು ತಮ್ಮ ಅನಾರೋಗ್ಯವನ್ನು ನಿರ್ಲಕ್ಷಿಸಿಯೂ, ವೈದ್ಯರ ಸೂಚನೆ ಮೀರಿಯೂ, ವಾಜಪೇಯಿಯವರ ಅಂತಿಮ ದರ್ಶನಕ್ಕೆಂದು ದೆಹಲಿಗೆ ತೆರಳಿದರು. ಅಟಲ್‌ರ ಅಗ್ನಿಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು. ಸರ್ವಪಕ್ಷಗಳಿಂದ ಶ್ರದ್ಧಾಂಜಲಿ ಸಭೆಯನ್ನೂ ಆಯೋಜಿಸಿದ್ದರು. ಅಟಲ್‌ರ ಅಸ್ಥಿಗಳನ್ನು ಕರ್ನಾಟಕದ ಶ್ರೀರಂಗಪಟ್ಟಣಕ್ಕೆ ತಂದು ಕಾವೇರಿಯಲ್ಲಿ ವಿಸರ್ಜನೆ ಮಾಡಿ ವಿಧಿಗಳನ್ನು ನೆರವೇರಿಸಿದರು.

ಅಟಲ್ ಮತ್ತು ಅನಂತ್ - ಈ ಇಬ್ಬರು ಅಜಾತಶತ್ರುಗಳೂ ನಮ್ಮ ನಡುವೆ ಇಲ್ಲ. ಆದರೆ ಅವರು ನಡೆದು ತೋರಿಸಿದ ಮಾರ್ಗ ನಮ್ಮ ಮುಂದಿದೆ. ಅದೇ ಮಾರ್ಗದಲ್ಲಿ ಮುನ್ನಡೆಯೋಣ ಎಂದು ವಾಜಪೇಯಿಯವರ ಜನ್ಮದಿನದಂದು ನಾವು ತೆಗೆದುಕೊಳ್ಳುವ ಸಂಕಲ್ಪವೇ ಅವರಿಬ್ಬರಿಗೆ ಸಲ್ಲಿಸಬಹುದಾದ ಶ್ರದ್ಧಾಂಜಲಿ.

ಪುಟ 3 ರಿಂದ

## ವೃಕ್ಷವಿಹಾರದ ಸಂಭ್ರಮ

ನಾಯಕ. ಹನುಮಂತರಾಯರಂಥ ಹಿರಿಯರು ಕಾಣುವಾಗಲೆಲ್ಲ ಅನಂತಕುಮಾರನ ಗುಂಪು ಲಾಠಿ ಹಿಡಿದು ಸುತ್ತುತ್ತಲೋ ಮರಗಳ ಕೊಂಬೆಗಳ ಮೇಲೆ ವಿಹರಿಸುತ್ತಲೋ ಇರುವುದು. ಹುಡುಗರನ್ನು ಗುಂಪುಕಟ್ಟಿಕೊಂಡು ಅಲೆದಾಡುವ ಅನಂತನ ಸ್ವಭಾವ ಈ ಹಿರಿಯರಿಗೆ ಕಿಂಚಿತ್ತೂ ಇಷ್ಟವಾಗದು.

ಈ ಮಕ್ಕಳ ಸೈನ್ಯದ ಕಿರಿಕಿರಿಯನ್ನು ತಾಳಲಾರದೆ ಒಮ್ಮೆ ಹನುಮಂತರಾವ್ ತಮ್ಮ ಗೆಳೆಯ ನಾರಾಯಣಶಾಸ್ತ್ರಿಗೆ ತಿಳಿಸಿಯೂ ಹೇಳಿದರು: "ನಿಮ್ಮ ಅನಂತಕುಮಾರ ಎಲ್ಲರನ್ನೂ ಗುಂಪು ಸೇರಿಸಿಕೊಂಡು ಮೂರು ಹೊತ್ತೂ ಕೋಲು ಹಿಡ್ಕೊಂಡು ಮರಕೋತಿ ಆಡ್ಕೊಂಡು ಕಾಲ ಕಳೀತಾನಲ್ಲ. ಇವರ ಆಟಕ್ಕೊಂದು ಮಿತಿ ಬೇಡವಾ? ನಿಮ್ಮ ಹುಡುಗನಿಗೆ ಬುದ್ಧಿ ಹೇಳಿ"

ಅದಕ್ಕೆ ಸೌಮ್ಯಸ್ವಭಾವದ ಶಾಸ್ತ್ರಿಗಳ ಉತ್ತರ ಹೀಗೆ: "ಅವನಿಗೇನು ಬುದ್ಧಿ ಹೇಳೋದು? ಅವನಿಗೇನಾದ್ರೂ ಹೇಳೋದಿಕ್ಕೆ ಹೋದ್ರೆ ನನಗೇ ಬುದ್ಧಿ ಹೇಳ್ತಾನೆ" "ಈ ಮಕ್ಳು ಓದೋದು ಬರಿಯೋದು ಯಾವಾಗ" ಎಂದು ಗೊಣಗಿಕೊಂಡು ಹನುಮಂತರಾವ್ ಸುಮ್ಮನಾಗುವರು. (ಮುಂದುವರಿಯುವುದು)

# ದೇಶದ ಪ್ರಗತಿಗೆ ಸಮಾನ ನಾಗರಿಕ ಸಂಹಿತೆ ಅಗತ್ಯ

ಏಕರೂಪ ನಾಗರಿಕ ಸಂಹಿತೆಯ ಕುರಿತು ವಿಚಾರಿಸುವ ಸಮಯ ಬಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿಯವರು ಘೋಷಣೆ ಮಾಡಿದ ನಂತರ ಈ ಕುರಿತು ವ್ಯಾಪಕವಾದ ಚರ್ಚೆಗಳು ನಡೆಯುತ್ತಿವೆ. ಅಚ್ಚರಿಯ ವಿಷಯವೆಂದರೆ, ರಾಷ್ಟ್ರೀಯ ಕಾನೂನು ಆಯೋಗವು ಈ ಕುರಿತು ಈಗಷ್ಟೇ ಸಲಹೆಗಳನ್ನು ಕೇಳಿದೆ; ಸಂಹಿತೆಯ ಕರಡು ರೂಪವನ್ನು ಕೂಡ ಸಿದ್ಧಪಡಿಸಿಲ್ಲ. ಆದರೆ, ಈಗಾಗಲೇ ಈ ಕುರಿತು ವಿರೋಧ ಪ್ರಾರಂಭವಾಗಿದೆ. ಕೇರಳ ರಾಜ್ಯ ವಿಧಾನಸಭೆಯು ಈ ಸಂಹಿತೆಯನ್ನು ವಿರೋಧಿಸಿದೆ. ಸ್ವಾತಂತ್ರ್ಯ ದೊರೆತು ೭೫ ವರ್ಷ ಕಳೆದಮೇಲೂ ಯಾವುದೇ ತಿಳಿವಳಿಕೆಯಿಲ್ಲದೆ, ಈ ಕುರಿತ ಪ್ರಸ್ತಾಪಕ್ಕೆ ವಿರೋಧ ವ್ಯಕ್ತವಾಗುತ್ತಿದೆಯೆಂದರೆ ಅದು ನಮ್ಮ ರಾಜಕೀಯ ಪಕ್ಷಗಳು ಮತ್ತು ಕೆಲವು ರಾಜಕಾರಣಿಗಳ ಪೂರ್ವಗ್ರಹಪೀಡಿತ ಮನಃಸ್ಥಿತಿಯನ್ನು ಬಿಂಬಿಸುತ್ತದೆ.

ಸಂವಿಧಾನ ಸಭೆಯಲ್ಲಿ ಕೂಡ ಈ ಕುರಿತು ತೀವ್ರವಾದ ವಾಗ್ವಾದ ನಡೆದಿತ್ತು. ಸಂವಿಧಾನ ಸಭೆಯ ಐವರು ಮುಸ್ಲಿಂ ಸದಸ್ಯರು ಈ ಪ್ರಸ್ತಾಪವನ್ನು ಶತಾಯಗತಾಯ ವಿರೋಧಿಸಿದರು. ಕೊನೆಗೆ ಇದನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ನಿರ್ದೇಶಕ ಸೂತ್ರಗಳ ಪಟ್ಟಿಗೆ ವರ್ಗಾಯಿಸುವ ದಿಸೆಯಲ್ಲಿ ಯಶಸ್ವಿಯೂ ಆದರು. ಇಂದು ಈ ಪ್ರಸ್ತಾಪವನ್ನು ವಿರೋಧಿಸುವ ಯಾರೊಬ್ಬರೂ ೭೫ ವರ್ಷಗಳ ಹಿಂದೆ ಮಾಡಿದ ವಾದಕ್ಕೆ ಒಂದು ಶಬ್ದವನ್ನೂ ಹೆಚ್ಚಿಗೆ ಸೇರಿಸಿಲ್ಲ ಎಂಬುದು ಗಮನಾರ್ಹ. ಶ್ರೀ ಕೆ ಎಂ ಮುನ್ಷಿ, ಡಾ. ಅಂಬೇಡ್ಕರ್ ಮತ್ತು ಅಲ್ಲಾಡಿ ಕೃಷ್ಣ ಅಯ್ಯರ್ ಅವರು ಈ ವಿಷಯವನ್ನು ಬಲವಾಗಿ ಸಮರ್ಥಿಸಿಕೊಂಡು ನಿರ್ದೇಶಕ ಸೂತ್ರಗಳಲ್ಲಿ ಉಳಿಸಿಕೊಳ್ಳಲು ಸಮರ್ಥರಾದರು ಎಂಬುದಕ್ಕಾಗಿ ದೇಶವು ಅವರೆಲ್ಲರಿಗೆ ಕೃತಜ್ಞವಾಗಿರಬೇಕಾಗಿದೆ. ಈ ಬಗ್ಗೆ ದೇಶದಾದ್ಯಂತ ಚರ್ಚೆ ನಡೆಯುತ್ತಿದ್ದರೂ ಯಾರೂ ಅದರ ಬಗ್ಗೆ ಅಧ್ಯಯನ ಮಾಡಿಲ್ಲ, ಅವರೆಲ್ಲರೂ ಮುಸ್ಲಿಂ ಸಮುದಾಯದ ಪರ ವಕಾಲತ್ತು ವಹಿಸಿದಂತೆ ಮಾತನಾಡುತ್ತಿದ್ದಾರೆ, ಮುಸ್ಲಿಮರೂ ಈ ಕುರಿತು ಯೋಚಿಸಿಲ್ಲ ಎಂಬುದು ಸುಸ್ಪಷ್ಟ.

ಭಾರತದಲ್ಲಿ ಈ ಹಿಂದೆ ಸತಿಪದ್ದತಿಯು ಪ್ರಚಲಿತವಾಗಿತ್ತು. ಈ ಪದ್ಧತಿಯನ್ನು ನಿಷೇಧಿಸಿ ಬ್ರಿಟಿಷರು ಕಾನೂನು ರಚಿಸಿದಾಗ ಯಾರೊಬ್ಬರೂ ಅದನ್ನು ವಿರೋಧಿಸಲಿಲ್ಲ. ಮುಸ್ಲಿಂ ಸಮುದಾಯದಲ್ಲಿಯೂ ಅತ್ಯಂತ ಅಮಾನವೀಯ ಹಾಗೂ ಕ್ರೂರವೆನ್ನಿಸುವ ಆಚರಣೆಗಳಿದ್ದವು. ಇಂತಹ ಆಚರಣೆಗಳಿಂದ ತಮ್ಮನ್ನು ರಕ್ಷಿಸುವಂತೆ ಮುಸ್ಲಿಂ ಸಮುದಾಯದ ಪ್ರಜ್ಞಾವಂತ ಸದಸ್ಯರೇ ಬ್ರಿಟಿಷ್ ಸರಕಾರದ ಮೇಲೆ ಒತ್ತಡ ಹೇರಿದ್ದರು. ಈ ಹಿನ್ನೆಲೆಯಲ್ಲಿ ಮುಸ್ಲಿಂ ವೈಯಕ್ತಿಕ ಕಾನೂನು - ಶರೀಯತ್ ಅಪ್ಲಿಕೇಶನ್ ಕಾಯಿದೆ, ೧೯೩೭ ಅಸ್ತಿತ್ವಕ್ಕೆ ಬಂದಿತು. ಶರೀಯತ್ ನಿಯಮಗಳು ಮೊದಲೇ ಇದ್ದಿದ್ದರೂ ಅವುಗಳನ್ನು ಯಾರೂ ಪಾಲಿಸುತ್ತಿರಲಿಲ್ಲ, ಹೀಗಾಗಿ, ಮುಸ್ಲಿಂ ಆಚರಣೆಗಳನ್ನು ಒಂದು ಶಿಸ್ತಿಗೊಳಪಡಿಸುವ ಸಲುವಾಗಿ ಅವುಗಳನ್ನು ಕಾನೂನಿನ ಚೌಕಟ್ಟಿನೊಳಗೆ ತರಲಾಗಿತ್ತು. ಕುರಾನಿನಲ್ಲಿ ಮಹಿಳೆಗೆ ವಿಚ್ಛೇದನದ ಹಕ್ಕಿಲ್ಲ, ಆದರೆ ಪುರುಷನು ತಲಾಖ್ ಹೇಳುವ ಮೂಲಕ ಪತ್ನಿಗೆ ವಿಚ್ಛೇದನ ಕೊಡಬಹುದು. ಹೀಗಾಗಿ, ಮಹಿಳೆಯರ ಪರಿಸ್ಥಿತಿ ದಯನೀಯವಾಗಿತ್ತು. ಮತ್ತೊಮ್ಮೆ ಮುಸ್ಲಿಂ ಪ್ರಜೆಗಳ ಒತ್ತಡಕ್ಕೆ ಸ್ಪಂದಿಸಿದ ಬ್ರಿಟಿಷ್ ಸರಕಾರವು ಮುಸ್ಲಿಂ ವಿವಾಹ ಕಾನೂನು, ೧೯೩೯ ಜಾರಿಗೊಳಿಸಿತು.




೧೯೪೭ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ದೇಶ ವಿಭಜನೆಯ ದೂರಗಾಮಿ ಪರಿಣಾಮಗಳನ್ನು ಸಂವಿಧಾನದ ನಿರ್ಮಾತೃಗಳು ಅರಿತಿದ್ದರು. ಧರ್ಮದ ಆಧಾರದ ಮೇಲೆ ಪಾಕಿಸ್ತಾನದ ನಿರ್ಮಾಣ ಮತ್ತು ನಂತರದ ವಲಸೆ, ಹಿಂಸಾಚಾರ ಎಲ್ಲವನ್ನೂ ಅವರು ಗಮನಿಸಿದ್ದರು. ಹೀಗಾಗಿ, ದೇಶವು ಜಾತ್ಯತೀತವಾಗಿಯೇ ಇರಬೇಕೆಂದು ಅವರು ನಿರ್ಧರಿಸಿದ್ದರು. ದೇಶವು ಸ್ವತಂತ್ರವಾದಾಗ ಬ್ರಿಟಿಷರ ಅಧೀನದಲ್ಲಿದ್ದ ಪ್ರದೇಶಗಳ ಜೊತೆಗೆ ಸುಮಾರು ೫೬೫ ಸಂಸ್ಥಾನಗಳು ಭಾರತದಲ್ಲಿದ್ದವು. ಇಂತಹ ಪರಿಸ್ಥಿತಿಯಲ್ಲಿ ದೇಶವು ಒಂದಾಗಿಯೇ ಉಳಿಯಬೇಕಾದರೆ ದೇಶದ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳಿರಬೇಕು, ಕಾನೂನುಗಳು ಪ್ರತಿಯೊಬ್ಬರಿಗೂ ಏಕಪ್ರಕಾರವಾಗಿ ಅನ್ವಯವಾಗಬೇಕು ಎಂದು ಅವರು ಭಾವಿಸಿದ್ದರು. ಭಾರತದಾದ್ಯಂತ ಏಕರೂಪದ ಆಡಳಿತ ಮತ್ತು ಕಾನೂನುವ್ಯವಸ್ಥೆಗಳನ್ನು ರೂಪಿಸಿ ಭಾರತದ ಏಕತೆಯನ್ನು ಕಾಪಾಡಿಕೊಳ್ಳಬೇಕು ಎಂಬ ವಿಚಾರದೊಂದಿಗೆ ಸಂವಿಧಾನದ ರಚನೆಯಾಯಿತು. ಆದರೆ ಸಂವಿಧಾನ ಸಭೆಯ ಕೆಲವು ಸದಸ್ಯರ ಆಕ್ಷೇಪದ ಹಿನ್ನೆಲೆಯಲ್ಲಿ ಏಕರೂಪ ನಾಗರಿಕ ಸಂಹಿತೆಯ ವಿಚಾರವನ್ನು ನಿರ್ದೇಶಕ ತತ್ತ್ವಗಳ ಪಟ್ಟಿಯಲ್ಲಿ ಸೇರಿಸಲಾಗಿತ್ತು. ಇಂದಿಗೆ ಸಂವಿಧಾನಕ್ಕೆ ೧೦೬ ತಿದ್ದುಪಡಿಗಳನ್ನು ತರಲಾಗಿದ್ದರೂ ಈ ವಿಚಾರ ಮಾತ್ರ ನಿರ್ದೇಶಕ ತತ್ತ್ವಗಳ ಪಟ್ಟಿಯಲ್ಲಿಯೇ ಉಳಿದುಕೊಂಡಿದೆ.



**ನ್ಯಾ. ಎನ್ ಕುಮಾರ್**
ನಿವೃತ್ತ ನ್ಯಾಯಮೂರ್ತಿಗಳು,
ಕರ್ನಾಟಕ ಹೈಕೋರ್ಟ್

ಆದರೆ ಹಿಂದೂ ಸಂಹಿತೆಯನ್ನು ಮಾತ್ರ ಐದು ವರ್ಷಗಳಲ್ಲಿಯೇ ಜಾರಿಗೊಳಿಸಲಾಗಿತ್ತು! ಈ ಮೊದಲು ಮುಸ್ಲಿಂ ಪುರುಷರು ನಾಲ್ಕು ಮದುವೆಯಾಗಬಹುದು ಎಂಬ ಸಂವಿಧಾನದ 14 ಹಾಗೂ15 ಕಲಂಗಳಡಿ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿತ್ತು. ಒಂದು ಸಂವಿಧಾನದಡಿ ಇಂತಹ ತಾರತಮ್ಯ ಸಹಿಸಲಾಗದು ಎಂದು ನ್ಯಾಯಮೂರ್ತಿಗಳಾದ ಚಾವ್ಲಾ ಹಾಗೂ ಗಜೇಂದ್ರಗಡ ಅವರಿದ್ದ ದ್ವಿಸದಸ್ಯ ಪೀಠ ಅಭಿಪ್ರಾಯಪಟ್ಟಿತ್ತು. "ಹಿಂದೂ ಸಮಾಜ ಅಭಿವೃದ್ಧಿ ಹೊಂದಿದೆ. ಮುಸ್ಲಿಂ ಸಮುದಾಯ ಇನ್ನೂ ಅಭಿವೃದ್ಧಿ ಹೊಂದಿಲ್ಲ. ಅದಕ್ಕಾಗಿ, ಅವರಿಗೆ ಸಂವಿಧಾನದಡಿ ವಿಶೇಷ ಅವಕಾಶಗಳಿರಬೇಕು. ಮುಸ್ಲಿಂ ವೈಯಕ್ತಿಕ ಕಾನೂನು ಅವರ ಹಕ್ಕು" ಎಂದು ವಾದಿಸಲಾಗಿತ್ತು. ಆದರೆ, ಈ ವೈಯಕ್ತಿಕ ಕಾನೂನಿನ ಹಕ್ಕು ಸಾರ್ವಜನಿಕ ಸ್ವಾಸ್ಥ್ಯ ಹಾಗೂ ನೀತಿಗಳಿಗೆ ಧಕ್ಕೆ ತರುವಂತಿದ್ದರೆ ಅದನ್ನು ನಿಯಂತ್ರಿಸಲು ಬೇರೊಂದು ಕಾನೂನು ತರುವುದು ಸಮಾಜ ಸುಧಾರಣೆಯ ಉದ್ದೇಶವೂ ಆಗಿರುತ್ತದೆ. ಸಂವಿಧಾನದ 25ನೇ ಕಲಂನಡಿ ವೈಯಕ್ತಿಕ ಕಾನೂನೇ ಪರಮೋಚ್ಚವಲ್ಲ. ಅದು ಸಾರ್ವಜನಿಕ ಆರೋಗ್ಯ ಹಾಗೂ ನೀತಿಗಳಿಗೆ ಅನುಗುಣವಾಗಿರಬೇಕು.

ವಿವಾಹ ವಿಚ್ಛೇದನ, ಆಸ್ತಿಗೆ ವಾರಸುದಾರಿಕೆ ಇಂತಹ ವಿಷಯಗಳು ಧರ್ಮಾಧಾರಿತವಲ್ಲ ಎಂದು ಸುಪ್ರೀಂಕೋರ್ಟ್ ಈಗಾಗಲೇ ಹೇಳಿದೆ. ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಮದುವೆಯೇ ಮಾಡಿಕೊಳ್ಳಲಿಲ್ಲ. ಮದುವೆ ಮಾಡಿಕೊಳ್ಳದೇ ಇರುವುದು ಅಗತ್ಯ, ಅನಿವಾರ್ಯ ಆಚರಣೆಯಾಗದಿದ್ದರೆ ನಾಲ್ವರು ಪತ್ನಿಯನ್ನು ಹೊಂದುವುದು ಹೇಗೆ ಅನಿವಾರ್ಯ ಆಚರಣೆಯಾಗುತ್ತದೆ?

ವಿದೇಶಗಳಲ್ಲೂ ಬಹುಪತ್ನಿಯರನ್ನು ಹೊಂದುವುದು ಕಡ್ಡಾಯವಾಗಿಲ್ಲ. ನಮ್ಮ ದೇಶದ ಮುಸ್ಲಿಮರಂತೂ ಮತಾಂತರಗೊಂಡವರು. ಇವರು ಮೂಲ ಇಸ್ಲಾಂ ಮತೀಯರ ವಾರಸುದಾರರಲ್ಲ. ಮೂಲ ಇಸ್ಲಾಂ ದೇಶಗಳಲ್ಲಿಯೇ ನಾಲ್ವರು ಪತ್ನಿಯರನ್ನು ಹೊಂದುವ ಕಡ್ಡಾಯವಿಲ್ಲ. ಅಲ್ಲಿ ಶೇ.80-85ರಷ್ಟು ಜನ ಏಕಪತ್ನೀತ್ವವನ್ನೇ ರೂಢಿಯಾಗಿಸಿಕೊಂಡಿದ್ದಾರೆ. ಕೆಲವರು ಗಂಡು ಹೆಣ್ಣಿನ ವಿವಾಹ ವಯಸ್ಸನ್ನೂ ಪ್ರಶ್ನಿಸುತ್ತಿದ್ದಾರೆ. ವೈಯಕ್ತಿಕ ಕಾನೂನುಗಳಿಗೆ ಈ ಸಂಹಿತೆಯ ಜಾರಿಯು ಅಡ್ಡಿಯಾಗುತ್ತದೆ ಎಂಬ ಇಂತಹ ವಾದಗಳಲ್ಲಿ ಹುರುಳಿಲ್ಲ.

ದೇಶದ ರಾಜಕಾರಣಿಗಳಲ್ಲಿ ರಾಜಕೀಯ ಇಚ್ಛಾಶಕ್ತಿಯಿಲ್ಲ. ದೇಶದ ಸಂವಿಧಾನವು ಯಾವುದೋ ಒಂದು ಸಮುದಾಯವನ್ನು ಪ್ರತಿನಿಧಿಸುತ್ತಿಲ್ಲ. ಕೆಲವರು ಈ ಸಂಹಿತೆಯನ್ನು ತಮ್ಮ ಸ್ವಾರ್ಥಸಾಧನೆಗಾಗಿ ವಿರೋಧಿಸುತ್ತಿದ್ದಾರೆ. ದತ್ತು ಹಾಗೂ ನಿರ್ವಹಣೆ ವಾರಸುದಾರರ ಕಾಯ್ದೆ ಜಾರಿಗೆ ಬಂದ ಮೇಲೆ ಅದು ಹಿಂದೂಗಳ ಪ್ರತಿಯೊಂದು ವೈಯಕ್ತಿಕ ಕಾನೂನಿನ ಮೇಲೂ ಪ್ರಭಾವ ಬೀರಿತ್ತು. ಆದರೂ, ಹಿಂದೂಗಳು ಬಂಡೆದ್ದರೆ? ಕೊಲೆಗಳಾದವೆ? ರಕ್ತಪಾತವಾಗಿದೆಯೇ?

"ದೇಶವು ಪ್ರಗತಿ ಹೊಂದಬೇಕಾದರೆ ಬಹುಜನರ ಆಶಯಗಳಿಗೆ ಸ್ಪಂದಿಸಬೇಕು. ಸಮಾನತೆಯನ್ನು ಕಾಯ್ದುಕೊಳ್ಳಬೇಕು" ಎಂದು ಸುಪ್ರೀಂಕೋರ್ಟ್ ಹೇಳುತ್ತಲೇ ಇದೆ. ವಿಶ್ವಗುರು ಎಂದು ಹೇಳಿಕೊಳ್ಳುವ ಭಾರತವು ಸಮಾನತೆಯಂತಹ ಮೌಲ್ಯ ಪ್ರತಿಪಾದನೆಯ ಒಂದು ಸಂಹಿತೆಯನ್ನು ಜಾರಿಗೊಳಿಸದಿದ್ದರೆ ಅದು ನಾಚಿಕೆಯಿಂದ ತಲೆತಗ್ಗಿಸುವ ಸಂಗತಿಯಾಗುತ್ತದೆ.

## ಅಭಿಪ್ರಾಯ


**ಅನ್ನ ಕೊಡುವ ದೇವರು** - ಸಾಮಾಜಿಕ ಸೇವೆ, ಪ್ರಾಮಾಣಿಕತನ, ಸಹಾಯ ಮಾಡುವ ಮನೋಭಾವನೆ ಅನಂತಕುಮಾರರಲ್ಲಿತ್ತು. ನಾವಂತೂ ದೇವರನ್ನು ಕಂಡಿಲ್ಲ. ಸಮಾಜಮುಖಿ, ಧಾರ್ಮಿಕ ಸೇವೆ ಮಾಡುವ ಹಾಗೂ ಅನ್ನ ಕೊಡುವ ನಿಜವಾದ ದೇವರನ್ನು ಶ್ರೀ ಅನಂತ ಸರ್ ರೂಪದಲ್ಲಿ ಕಂಡೆವು.

**- ಗೋವಿಂದರಾಜ ರಾ. ದೇಶಪಾಂಡೆ**

ವ್ಯಕ್ತಿ ವಿಶೇಷ ಮಾಲಿಕೆ

# “ಉಕ್ಕಿನ ಮನುಷ್ಯ” ಸರ್ದಾರ್ ಪಟೇಲ್

೨೦೧೪ರಲ್ಲಿ ಭಾರತದ ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ತರುಣದಲ್ಲಿಯೇ ನರೇಂದ್ರ ಮೋದಿಯವರು ಅಕ್ಟೋಬರ್ ೩೧ನ್ನು 'ರಾಷ್ಟ್ರೀಯ ಏಕತಾ ದಿವಸ' ಎಂಬುದಾಗಿ ಪ್ರತಿವರ್ಷ ಆಚರಿಸುವ ಘೋಷಣೆ ಮಾಡಿದರು. ಸರದಾರ್ ಪಟೇಲ್ ಎಂದೇ ಪ್ರಸಿದ್ಧರಾದ ಶ್ರೀ ವಲ್ಲಭ್ ಭಾಯಿ ಝುವೇರ್ ಭಾಯಿ ಪಟೇಲರು ಅಂದಿಗೆ ೧೩೯ ವರ್ಷಗಳ ಹಿಂದೆ, ಅಂದರೆ ೧೮೭೫ರಲ್ಲಿ ಹುಟ್ಟಿದ ದಿನವದು.



೧೯೪೭ರಲ್ಲಿ ಭಾರತ ಸ್ವತಂತ್ರವಾದಾಗ ಇಂದಿನ ಸ್ವರೂಪದಲ್ಲಿರಲಿಲ್ಲ. ಬ್ರಿಟಿಷರ ಆಳ್ವಿಕೆಯಲ್ಲಿದ್ದ ಪ್ರದೇಶಗಳನ್ನು ಹೊರತುಪಡಿಸಿ ಉಳಿದ ೫೬೫ ಆಶ್ರಿತ ಸಂಸ್ಥಾನಗಳ ಪ್ರಜೆಗಳಿಗೆ ಸ್ವಾತಂತ್ರ್ಯದ ಭಾಗ್ಯ ದೊರೆತಿರಲಿಲ್ಲ. ಬ್ರಿಟಿಷರು ಈ ಆಶ್ರಿತ ಸಂಸ್ಥಾನಗಳ ರಾಜರಿಗೆ ಭಾರತ ಅಥವಾ ಪಾಕಿಸ್ತಾನದ ಜೊತೆ ವಿಲೀನವಾಗುವ ನಿರ್ಧಾರ ತೆಗೆದುಕೊಳ್ಳುವ ಆಯ್ಕೆ ನೀಡಿದ್ದರು. ಸ್ವಾತಂತ್ರ್ಯಪೂರ್ವ ಭಾರತದ ಮಧ್ಯಂತರ ಸರಕಾರದಲ್ಲಿ ಹಾಗೂ ಸ್ವಾತಂತ್ರ್ಯಾನಂತರದ ಸರಕಾರದಲ್ಲಿ ಗೃಹಮಂತ್ರಿಯಾಗಿದ್ದ ಪಟೇಲರು ಬಹುತೇಕ ಸಂಸ್ಥಾನಗಳ ರಾಜರನ್ನು ತಮ್ಮ ರಾಜ್ಯಗಳನ್ನೂ ಭಾರತದೊಂದಿಗೆ ವಿಲೀನ ಮಾಡುವಂತೆ ಒಪ್ಪಿಸಿದರು. ಆದರೆ, ಹೈದರಾಬಾದ್ ಮತ್ತು ಜುನಾಗಢದ ನವಾಬರು ಪಾಕಿಸ್ತಾನದ ಜೊತೆ ವಿಲೀನವನ್ನು ಬಯಸಿದರೆ, ಕಾಶ್ಮೀರದ ರಾಜರು ಯಾವ ನಿರ್ಧಾರವನ್ನೂ ತೆಗೆದುಕೊಳ್ಳದೆ ವಿಳಂಬನೀತಿಯನ್ನು ಅನುಸರಿಸುತ್ತಿದ್ದರು. ಜುನಾಗಢದಲ್ಲಿ ಶೇ ೮೦ರಷ್ಟು ಹಿಂದೂಗಳಿದ್ದು ಪವಿತ್ರ ಕ್ಷೇತ್ರವಾದ ಸೋಮನಾಥವೂ ಅದರ ವ್ಯಾಪ್ತಿಯಲ್ಲಿತ್ತು.

ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ಆಂಧ್ರಪ್ರದೇಶಗಳ ಬೃಹತ್ ಭೂಭಾಗ ಹೈದರಾಬಾದಿನ ವಶದಲ್ಲಿತ್ತು. ಹೀಗಾಗಿ ಸೇನೆಯನ್ನು ಬಳಸಿ ಅವೆರಡೂ ಸಂಸ್ಥಾನಗಳನ್ನು ವಶಪಡಿಸಿಕೊಂಡು ಭಾರತಕ್ಕೆ ಇಂದಿನ ಸ್ವರೂಪವನ್ನು ನೀಡಿದ ಪಟೇಲರ ಜನ್ಮದಿನವನ್ನು ಏಕತಾ ದಿವಸವನ್ನಾಗಿ ಆಚರಿಸುವ ಮೂಲಕ ಮುಂದಿನ ಪೀಳಿಗೆಗಳು ಅವರನ್ನು ಕೃತಜ್ಞತೆಯಿಂದ ಸ್ಮರಿಸುವಂತಾಗಿದೆ.

ಹಾಗೆ ನೋಡಿದರೆ, ಪಟೇಲರೇ ಭಾರತದ ಮೊದಲ ಪ್ರಧಾನಮಂತ್ರಿಯಾಗಬೇಕಾಗಿತ್ತು. ೧೯೩೯ರಿಂದ ೧೯೪೬ರ ವರೆಗೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮೌಲಾನಾ ಅಬುಲ್ ಕಲಾಂ ಆಜಾದರ ಜಾಗಕ್ಕೆ ಇನ್ನೊಬ್ಬರನ್ನು ಆಯ್ಕೆ ಮಾಡಬೇಕಿತ್ತು. ಹಾಗೆ ಆಯ್ಕೆಯಾದವರು ಮುಂದಿನ ಪ್ರಧಾನಿಯಾಗುವುದು ನಿಶ್ಚಿತವಾಗಿತ್ತು. ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆದಾಗ ೧೨ ಪ್ರದೇಶ ಕಾಂಗ್ರೆಸ್ ಸಮಿತಿಗಳು ಪಟೇಲರ ಹೆಸರನ್ನೂ ೨ ಸಮಿತಿಗಳು ಜೆ ಬಿ ಕೃಪಲಾನಿಯವರ ಹೆಸರನ್ನೂ ಸೂಚಿಸಿದ್ದವು. ಪಟೇಲರು ಗಾಂಧೀಜಿಯವರಿಗೆ ಅತ್ಯಂತ ಪ್ರೀತಿಪಾತ್ರರಾಗಿದ್ದ ನಿಷ್ಠ ಅನುಯಾಯಿಯಾಗಿದ್ದರು. ಆದರೆ ಪಟೇಲರ ಕೈಕೆಳಗೆ ಕೆಲಸ ಮಾಡಲು ತನಗೆ ಸಾಧ್ಯವಿಲ್ಲ ಎಂಬ ಇಂಗಿತವನ್ನು ನೆಹರೂ ವ್ಯಕ್ತಪಡಿಸಿದ್ದರಿಂದ ಗಾಂಧೀಜಿ ಮೌನವಹಿಸಿದರು. ಪಟೇಲರು ಬಲಪಂಥೀಯ ವಿಚಾರಧಾರೆ ಹೊಂದಿದವರು, ದೇಶವಿಭಜನೆಗೆ ವಿರೋಧವಾಗಿದ್ದವರು. ಹೀಗಾಗಿ ದೇಶ ವಿಭಜನೆಯ ಸಂದರ್ಭದಲ್ಲಿ ಎಡಪಂಥೀಯ ನಿಲುವು ಹೊಂದಿದ ನೆಹರೂರವರೇ ಪಕ್ಷ ಮುನ್ನಡೆಸುವುದು ಸೂಕ್ತ ಎಂದು ಭಾವಿಸಿದ ಮೌಲಾನಾ ಅಬುಲ್ ಕಲಂ ಆಜಾದ್ ಅವರ ಹೆಸರನ್ನು ಪ್ರಸ್ತಾಪಿಸಿದರು. ಗಾಂಧೀಜಿಯವರ ಇಂಗಿತದಂತೆ ಪಟೇಲರು ನೆಹರೂ ಹೆಸರನ್ನು ಅನುಮೋದಿಸಿದರು.


ಮಧ್ಯಂತರ ಸರಕಾರದಲ್ಲಿ ಗೃಹ ಇಲಾಖೆಯನ್ನು ನಿರ್ವಹಿಸುವಂತೆ ಪಟೇಲರನ್ನು ಒಪ್ಪಿಸಲಾಯಿತು. ಸಾಮಾನ್ಯವಾಗಿ ಪ್ರಧಾನಿಯ ನಂತರ ಗೃಹಮಂತ್ರಿಯೇ ಪ್ರಮುಖ ಹುದ್ದೆ. ಆದರೆ, ಮುಸ್ಲಿಂಲೀಗಿನ ಲಿಯಾಖತ್ ಅಲಿಖಾನ್ ಅವರನ್ನು ಬ್ರಿಟಿಷ್ ಸರಕಾರದ ಸಲಹೆಯ ಮೇರೆಗೆ ಅರ್ಥಸಚಿವರನ್ನಾಗಿ ನೆಹರೂ ನೇಮಿಸಿಕೊಂಡರು. ಅವರ ಮೂಲಕ ಗೃಹ ಇಲಾಖೆಗೆ ಹಣಕಾಸಿನ ಅಡಚಣೆ ಉಂಟಾಗುವಂತೆ ನೋಡಿಕೊಂಡ ನೆಹರೂ ಮತ್ತು ಬ್ರಿಟಿಷ್ ಸರಕಾರದ ಉದ್ದೇಶಗಳನ್ನು ಯಾರು ಬೇಕಾದರೂ ಅರಿಯಬಹುದು. ಆದರೆ ಉಕ್ಕಿನ ಮನುಷ್ಯ ಸರದಾರ್ ವಲ್ಲಭಭಾಯಿ ಪಟೇಲರು ಎದೆಗುಂದದೆ ಭಾರತದ ಏಕೀಕರಣಕ್ಕೆ ಭೂಮಿಕೆಯನ್ನು ಸಮರ್ಥವಾಗಿ ಸಿದ್ಧಪಡಿಸಿದರು. ಸ್ವತಂತ್ರ ಭಾರತದಲ್ಲಿ ನೆಹರೂ ಮಂತ್ರಿಮಂಡಳದಲ್ಲಿ ಸಚಿವರಾದರೂ ತಮ್ಮ ಅಂತಃಸಾಕ್ಷಿಗೆ ನಿಷ್ಠರಾಗಿ ಕೆಲಸ ಮಾಡಿದರು. ನೆಹರೂರವರ ಹಿಂದೂ ವಿರೋಧಿಯೇ ಎನ್ನಬಹುದಾದ ನಿಲುವುಗಳನ್ನು ಬಲವಾಗಿ ವಿರೋಧಿಸಿದರು. ಅದಕ್ಕೆ ಉದಾಹರಣೆಯಾಗಿ, ೧೯೫೦ರ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯನ್ನು ಗಮನಿಸಬಹುದು. ತಮ್ಮ ವಿಚಾರಧಾರೆಗೆ ಪೂರಕವಾಗಿದ್ದ ಕೃಪಲಾನಿಯವರನ್ನು ನೆಹರೂ ಬೆಂಬಲಿಸಿದ್ದರೆ ಪಟೇಲರು ಪುರುಷೋತ್ತಮದಾಸ್ ಟಂಡನ್ ಅವರನ್ನು ಬೆಂಬಲಿಸಿ ಗೆಲ್ಲಿಸಿದರು. ಭಾರತದ ಮೊದಲ ರಾಷ್ಟ್ರಪತಿಯಾಗಿ ಚಕ್ರವರ್ತಿ ರಾಜಗೋಪಾಲಾಚಾರಿಯವರನ್ನು ನೆಹರೂ ಬೆಂಬಲಿಸಿದರೆ ಪಟೇಲರು ಬಾಬು ರಾಜೇಂದ್ರ ಪ್ರಸಾದರನ್ನು ಬೆಂಬಲಿಸಿದರು. ನೆಹರೂ ವಿರೋಧವನ್ನೂ ಲೆಕ್ಕಿಸದೆ ಸೋಮನಾಥ ದೇವಾಲಯದ ಪುನರ್ನಿರ್ಮಾಣದ ಕಾರ್ಯ ಕೈಗೊಂಡರು. ಜುನಾಗಢ ಸಂಸ್ಥಾನದ ಮೇಲೆ ಪಟೇಲರು ನಡೆಸಿದ ಸೇನಾಕಾರ್ಯಾಚರಣೆಯನ್ನು ನೆಹರೂ ವಿರೋಧಿಸಿದ್ದರು ಎಂಬುದೂ ಇತಿಹಾಸ. ಪಟೇಲರು ದೇಶದ ಆರ್ಥಿಕತೆಯ ಕುರಿತು ಸ್ಪಷ್ಟ ನಿಲುವುಗಳನ್ನು ಹೊಂದಿದ್ದರು. ಆತ್ಮನಿರ್ಭರತೆ, ಕೈಗಾರಿಕೀಕರಣಗಳನ್ನು ಅವರು ಪ್ರಬಲವಾಗಿ ಪ್ರತಿಪಾದಿಸಿದರು. ಸಂಪತ್ತನ್ನು ಹಂಚುವ ಮೊದಲು ಅದನ್ನು ಸೃಷ್ಟಿಸಬೇಕೆಂದು ಅವರು ಸ್ಪಷ್ಟ ನಿಲುವನ್ನು ತಾಳಿದ್ದರು. ರಾಷ್ಟ್ರೀಕರಣವನ್ನು ಅವರು ವಿರೋಧಿಸಿದ್ದರು. ಗುಜರಾತಿನಲ್ಲಿ ಸಹಕಾರಿ ಚಳುವಳಿಯ ನೇತೃತ್ವ ವಹಿಸಿದರು. ಅವರು ಪ್ರಾರಂಭಿಸಿದ ಖೇಡಾ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘವು ಮುಂದೆ ಎಲ್ಲ ಸಹಕಾರ ಸಂಘಗಳಿಗೆ ಅದರಲ್ಲೂ ಹಾಲು ಉತ್ಪಾದಕರ ಸಂಘಗಳಿಗೆ ಮಾದರಿಯಾಯಿತು. ಕಾರ್ಮಿಕರು ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವ ಮೊದಲು ಸಂಪತ್ತನ್ನು ಸೃಷ್ಟಿಮಾಡುವ ಕೆಲಸದಲ್ಲಿ ನಿಷ್ಠೆಯಿಂದ ಭಾಗವಹಿಸಬೇಕೆಂಬುದು ಅವರ ಹೇಳಿಕೆ.

ಗುಜರಾತಿನ ರೈತಕುಟುಂಬವೊಂದರಲ್ಲಿ ಜನಿಸಿದ ಪಟೇಲರು ಕಾನೂನುವ್ಯಾಸಂಗ ಮಾಡಿದ ನಂತರ ಗೋಧ್ರಾ, ಬೋರ್ಸಾದ್ ಮತ್ತು ಆನಂದ್ ನಗರಗಳಲ್ಲಿ ವೃತ್ತಿ ನಡೆಸಿದರು. ಕಾನೂನು ವಿಷಯದಲ್ಲಿ ಉನ್ನತ ವ್ಯಾಸಂಗ ನಡೆಸುವ ಸಲುವಾಗಿ ೧೯೧೧ರಲ್ಲಿ ಇಂಗ್ಲೆಂಡಿಗೆ ತೆರಳಿದ ಅವರು ಮೂರುವರ್ಷಗಳ ತರುವಾಯ ಭಾರತಕ್ಕೆ ಮರಳಿ ಅಹಮದಾಬಾದಿನಲ್ಲಿ ಯಶಸ್ವೀ ವೃತ್ತಿಜೀವನವನ್ನು ನಡೆಸುತ್ತಿದ್ದರು. ೧೯೧೭ರಲ್ಲಿ ಗಾಂಧೀಜಿಯವರ ಪ್ರಭಾವಕ್ಕೆ ಸಿಲುಕಿ ಸ್ವಾತಂತ್ರ್ಯ ಚಳುವಳಿಯನ್ನು ಪ್ರವೇಶ ಮಾಡಿದರು. ಅವರ ಸಲಹೆಯ ಮೇರೆಗೆ ಗುಜರಾತ್ ಸಭಾದ ಕಾರ್ಯದರ್ಶಿಯಾದರು. ಖೇಡಾ ಜಿಲ್ಲೆಯ ರೈತರ ಕರನಿರಾಕರಣೆ ಚಳುವಳಿಯ ನೇತೃತ್ವ ವಹಿಸಿದರು. ೧೯೨೦ರ ಅಸಹಕಾರ ಚಳುವಳಿಗೆ ಮೂರುಲಕ್ಷ ಜನರನ್ನು ನೋಂದಾಯಿಸಿದ್ದಲ್ಲದೆ ೧೫ ಲಕ್ಷ ರೂಪಾಯಿ ಹಣವನ್ನೂ ಸಂಗ್ರಹಿಸಿದರು. ಪಟೇಲರಿಗೆ ಸರದಾರ್ ಎಂಬ ಬಿರುದು ಬಂದದ್ದು ಬಾರ್ಡೋಲಿ ಸತ್ಯಾಗ್ರಹದ ಮೂಲಕ. ೧೯೨೮ರಲ್ಲಿ ತೀವ್ರವಾದ ಕ್ಷಾಮ ಮತ್ತು ಮಿತಿಮೀರಿದ ಕರಭಾರವನ್ನು ಪ್ರತಿಭಟಿಸಿ ಬಾರ್ಡೋಲಿಯಲ್ಲಿ ಪ್ರಾರಂಭವಾದ ಚಳುವಳಿಯು ಇಡೀ ಗುಜರಾತಿಗೆ ಹಬ್ಬಿ ಬ್ರಿಟಿಷ್ ಸರಕಾರವನ್ನೇ ಮಣಿಸಿತು. ಉಪ್ಪಿನ ಸತ್ಯಾಗ್ರಹ, ಭಾರತ ಬಿಟ್ಟು ತೊಲಗಿ ಚಳುವಳಿಗಳಲ್ಲೂ ಅವರು ಮಹಾತ್ಮಾ ಗಾಂಧಿಯವರ ಬೆನ್ನೆಲುಬಿನಂತೆ ಕೆಲಸ ಮಾಡಿದ್ದಲ್ಲದೆ ಯರವಾಡಾ, ನಾಸಿಕ್, ಅಹಮದ್ ನಗರ, ನಾಗಪುರ ಮುಂತಾದ ಜೈಲುಗಳಲ್ಲಿ ಹಲವಾರು ವರ್ಷಗಳ ಸೆರೆವಾಸವನ್ನೂ ಅನುಭವಿಸಿದರು. ೧೯೩೧ರಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಸರ್ದಾರ್ ವಲ್ಲಭಭಾಯಿ ಪಟೇಲ್ ಆಯ್ಕೆಯಾಗಿದ್ದರು. ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಅನೇಕ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಬಗ್ಗೆಯೂ ಗಮನ ಹರಿಸಿದ್ದರು. ಮೂಲಭೂತ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ರಕ್ಷಣೆ, ಜಾತ್ಯತೀತ ರಾಷ್ಟ್ರದ ಸ್ಥಾಪನೆ, ಕಾರ್ಮಿಕರಿಗೆ ಕನಿಷ್ಠ ವೇತನ, ಅಸ್ಪೃಶ್ಯತೆ ನಿವಾರಣೆ, ಮದ್ಯಪಾನ ನಿಷೇಧ, ಜಾತಿಭೇದ ನಿರ್ಮೂಲನೆ ಮತ್ತು ಮಹಿಳಾ ವಿಮೋಚನೆ ಅವರ ಇತರ ಆದ್ಯತೆಗಳಲ್ಲಿ ಸೇರಿದ್ದವು.

ಭಾರತದ ಮೊದಲ ಗೃಹ ಮಂತ್ರಿ ಮತ್ತು ಉಪ ಪ್ರಧಾನ ಮಂತ್ರಿಯಾಗಿ ಆಯ್ಕೆಯಾದ ಪಟೇಲ್, ದೇಶವಿಭಜನೆಯ ಕಾರಣದಿಂದ ಉಂಟಾದ ಮಹಾವಲಸೆಯ ಪರಿಣಾಮಗಳನ್ನು ಎದುರಿಸಬೇಕಾಯಿತು. ಜೊತೆಗೆ ಮಹಾತ್ಮಾಗಾಂಧಿಯವರ ಹತ್ಯೆಯ ನಂತರದ ದಂಗೆಗಳೂ ಪ್ರಮುಖ ಸಮಸ್ಯೆಯಾಗಿ ಎದುರಾಗಿದ್ದವು. ದೇಶದಾದ್ಯಂತ ಸಮಸ್ಯೆಗಳನ್ನು ಒಂದೇ ರೀತಿಯಾಗಿ ಎದುರಿಸಲು ಒಂದು ನಿರ್ದಿಷ್ಟ ಪಡೆ ಇದ್ದರೆ ಮಾತ್ರ ದೇಶ ಒಂದಾಗಿ ಉಳಿಯುವುದು ಸಾಧ್ಯ ಎಂದು ಮನಗಂಡ ಅವರು, ಇಂಡಿಯನ್ ಎಡ್ಮಿನಿಸ್ಟ್ರೇಟಿವ್ ಸರ್ವಿಸ್ (IAS) ಮತ್ತು ಇಂಡಿಯನ್ ಪೋಲೀಸ್ ಸರ್ವಿಸ್ (IPS) ಶ್ರೇಣಿಗಳನ್ನು ಸ್ಥಾಪಿಸಿದ್ದಲ್ಲದೆ (ಪುಟ 9 ರಲ್ಲಿ ಮುಂದುವರೆದಿದೆ)

(ಪ್ರಸ್ತುತ ಶಿಕ್ಷಣಕ್ಷೇತ್ರವನ್ನು ಗಮನಿಸಿದರೆ ಇಂದಿನ ಮಕ್ಕಳು ನಾಳಿನ ನಾಗರಿಕರಾಗಿ ಹೇಗೆ ಯಶಸ್ವಿಯಾದಾರು ಎಂಬ ಪ್ರಶ್ನೆ ಬೃಹದಾಕಾರವಾಗಿ ಮುಂದೆ ನಿಲ್ಲುತ್ತದೆ. ೧೯೮೩ರಲ್ಲಿ ಜನತಾಪಕ್ಷ ಅಧಿಕಾರಕ್ಕೆ ಬಂದ ತರುಣದಲ್ಲಿ ಇದ್ದ ಶಿಕ್ಷಣಕ್ಷೇತ್ರದ ವಾಸ್ತವದರ್ಶನವನ್ನು ಮಾಡಿಸುವ, ಅನಂತಕುಮಾರ್ ನೇತೃತ್ವದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ಪ್ರಕಟಿಸಿದ ಕರಾಳಪತ್ರವನ್ನು ಓದಿದರೆ ಕಳೆದ ಐವತ್ತು ವರ್ಷಗಳಲ್ಲಿ ಯಾವುದೇ ಬದಲಾವಣೆಯಿರಲಿ, ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿರುವುದನ್ನು ಕಾಣಬಹುದು. ಕರಾಳಪತ್ರವು ವಾಸ್ತವತೆಯ ಮೇಲೆ ಕ್ಷ-ಕಿರಣ ಬೀರುವುದರ ಜೊತೆಗೆ ಆಗಬೇಕಾದ ಕೆಲಸಗಳ ಬಗ್ಗೆ ಸೂಚನೆಯನ್ನೂ ನೀಡುತ್ತದೆ. ಶಿಕ್ಷಣಕ್ಷೇತ್ರದ ಬಗ್ಗೆ ಪ್ರಾಮಾಣಿಕ ಕಾಳಜಿ ಹೊಂದಿರುವ ಎಲ್ಲರಿಗೂ ಮಾರ್ಗದರ್ಶಿಯಾಗಬಲ್ಲ ಕರಾಳಪತ್ರದ ಸಂಪೂರ್ಣ ಪಾಠವನ್ನು ಈ ಸಂಚಿಕೆಯಿಂದ ಕಂತುಗಳಲ್ಲಿ ಪ್ರಕಟಿಸುತ್ತಿದ್ದೇವೆ – ಸಂ)

# ಬೆಳಕಿನತ್ತ.....




ಈ ಕರಾಳ ಪತ್ರದ ಪುಟಗಳು ಬೆಳಕಿನತ್ತ ನೋಟದಿಂದ ಆರಂಭವಾಗುತ್ತಿರುವುದೊಂದು ವೈಶಿಷ್ಟ್ಯ. ಈ ನಾಡಿನ ಅಗ್ರಮಾನ್ಯ ವಿದ್ಯಾರ್ಥಿ ಸಂಘಟನೆಯಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಎಂದಿನಿಂದಲೂ ಶೈಕ್ಷಣಿಕ, ರಾಜಕೀಯ, ಸಾಮಾಜಿಕ ಆಗುಹೋಗುಗಳಲ್ಲಿ ಜಾಗೃತ ಪ್ರಹರಿಯ ಬೆಳಗುವ ದೀವಿಗೆಯ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದೆ. ಅದರಲ್ಲೂ, ವಿಶೇಷವಾಗಿ ಕರ್ನಾಟಕ ರಾಜ್ಯದ ಶಿಕ್ಷಣರಂಗದ ಆಗುಹೋಗುಗಳನ್ನು ವಿದ್ಯಾರ್ಥಿ ಸಮುದಾಯದ ಅಂತಃಸಾಕ್ಷಿಯಾಗಿ ಗಮನಿಸುತ್ತಿದೆ. ಕಳೆದ ಕೆಲವು ವರ್ಷಗಳಲ್ಲಿ ರಾಜ್ಯದ ಉಚ್ಚ ಶಿಕ್ಷಣರಂಗ (ಇಡೀ ಶಿಕ್ಷಣರಂಗವೆನ್ನಬಹುದೇನೋ, ಈ ಕರಾಳ ಪತ್ರ ಉಚ್ಚ ಶಿಕ್ಷಣಕ್ಕೆ ಸೀಮಿತವಾಗಿದೆ) ರಾಜಕೀಯ ಹಿತಾಸಕ್ತಿಗಳ ಸ್ವಾರ್ಥದಾಟಕ್ಕೆ ಒಳಗಾಗಿ ಅತ್ಯಂತ ಏರುಪೇರುಗಳಿಗೆ ಸಿಲುಕಿರುವುದು ದುರ್ದೈವದ ಸಂಗತಿ. ರಾಜ್ಯದ ಲಕ್ಷಾಂತರ ಎಳೆಯರ ಭವಿಷ್ಯ ಭ್ರಷ್ಟ ರಾಜಕಾರಣಿ ಆಡಳಿತಗಾರರ ಕೈಗೆ ಸಿಲುಕಿ ನಲುಗಿ ಹೋಗುತ್ತಲಿದೆ.

1983ರ ಜನವರಿಯಲ್ಲಿ (ನೂತನ)ಸರಕಾರ ಅಧಿಕಾರ ವಹಿಸಿಕೊಂಡೊಡನೆ ಕರ್ನಾಟಕದ ಶಿಕ್ಷಣರಂಗದಲ್ಲಿ ಸುಧಾರಣೆ ತರುವ ಪ್ರಯತ್ನಗಳು ಆರಂಭವಾಗಬಹುದು, ಈ ಹಿನ್ನೆಲೆಯಲ್ಲಿ ಸಮಗ್ರ ಶಿಕ್ಷಣ ಯೋಜನೆಯನ್ನು ರೂಪಿಸಬಹುದೆಂಬ ನಿರೀಕ್ಷೆ ಗಾಢವಾಗಿತ್ತು. ಕಾಂಗ್ರೆಸ್ ಪಕ್ಷದ ಸರ್ಕಾರಗಳು ಶಿಕ್ಷಣಕ್ಕೆ ಕನಿಷ್ಠ ಪ್ರಾಶಸ್ತ್ಯ ಮತ್ತು ಅಸಮರ್ಥ ನೇತೃತ್ವ ಕೊಡುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು. ವಿ. ವಿ. ಸ್ವಾಯತ್ತತೆಯ ವಸ್ತ್ರಾಪಹರಣ, ವಿದ್ಯಾರ್ಥಿ ಪ್ರಾತಿನಿಧ್ಯದ ಧ್ವನಿಯನ್ನು ಉಸಿರುಗಟ್ಟಿಸಿದ್ದು, ರಾಜಕೀಯ ಸ್ವಾರ್ಥಪ್ರೇರಿತ ಶಿಕ್ಷಣಾಡಳಿತ ಅಧಿಕಾರಿಗಳ ನೇಮಕ ದರ್ಬಾರುಗಳು, ಕ್ಯಾಪಿಟೇಷನ್ ರಕ್ತ ಬೀಜಾಸುರನ ಅಂಕುರಾರ್ಪಣೆ, ವೃತ್ತಿ ಪರ ಶಿಕ್ಷಣ ( ಜೆ. ಓ. ಸಿ) ಪೂರ್ವಾಪರ ಯೋಜನೆಯಿಲ್ಲದೆ ಆರಂಭಿಸಿ ತ್ರಿಶಂಕು ನರಕ ನಿರ್ಮಿಸಿದ್ದು, ಜಾತಿ ಗುಂಪುಗಳ ಒತ್ತಡಕ್ಕೆ ಮಣಿದು ಆರಂಭಗೊಂಡ ಶಿಕ್ಷಣ ಸಂಸ್ಥೆಗಳ ಅನಿಷ್ಟ ಮೊಟ್ಟೆಗಳು ರಾಜ್ಯದ ಶಿಕ್ಷಣ ರಂಗವನ್ನು ಆಗಲೇ ಹಾದಿತಪ್ಪಿಸಿ ದುರಂತದತ್ತ ದೂಡುತ್ತಿದ್ದವು.

ಕರಿಛಾಯೆಯ ಈ ಶಿಕ್ಷಣ ಕ್ಷಿತಿಜದ ಸಂದರ್ಭದಲ್ಲಿ ಆಡಳಿತಾರೂಢ ಪಕ್ಷವು 83ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮೇಲಿನ ಪಿಡುಗುಗಳನ್ನು ತೊಡೆದು ಶಿಕ್ಷಣವನ್ನು ಸುಧಾರಿಸುವ ಎತ್ತರದ ಭರವಸೆಗಳನ್ನು ಕೊಟ್ಟಿತ್ತು. ಆದರೆ, ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ ಎಲ್ಲ ಸಂಗತಿಗಳನ್ನೂ ಜಾತಿ ಮತ್ತು ಭ್ರಷ್ಟ ರಾಜಕೀಯ ಒತ್ತಡಗಳಿಗೆ ಮಣಿದು, ಗಾಳಿಗೆ ತೂರಿರುವುದು ಪ್ರಸಕ್ತ ಸ್ಥಿತಿಯಿಂದ ಸುಸ್ಪಷ್ಟ. ಇಡೀ ಶಿಕ್ಷಣರಂಗದಲ್ಲಿ ಆಗಿರುವ ವೈಫಲ್ಯವನ್ನು (ಅ) ನೀತಿ ನಿರ್ಣಯಗಳ ವಿಫಲತೆ (ಬ) ಆಡಳಿತಾತ್ಮಕ ವಿಫಲತೆ ಎಂದು ವಿಂಗಡಿಸಬಹುದು. ಈ ಮೇಲಿನೆರಡು ಸಂಗತಿಗಳಲ್ಲೂ ಕೂಡ ಹಲವನ್ನು ದುರುದ್ದೇಶದಿಂದ ಮಾಡಿದ್ದರೆ, ಇನ್ನು ಕೆಲವು ಸೋಮಾರಿತನ ಅಸಡ್ಡೆಗಳಿಂದ ಆದದ್ದು. ಆದರೆ ಈ ಎಲ್ಲಕ್ಕೂ ಕಾರಣ, ರಾಜ್ಯದ ಆಡಳಿತದ ನೇತೃತ್ವ ವಹಿಸಿದವರ ರಾಜಕೀಯ ಭ್ರಷ್ಟತೆ ಎಂಬುದು ನಿರ್ವಿವಾದ. ಇದರಿಂದಾಗಿ ಶಿಕ್ಷಣದ ವ್ಯವಸ್ಥೆಯನ್ನು ಸರಿಪಡಿಸಲು ಹೆಚ್ಚು ದಕ್ಷ ಯಶಸ್ವಿ ಯಾಗಿಸಲು ಯೋಚಿಸಿದಂತಹ ವಿಚಾರಗಳೂ ನೆನೆಗುದಿಗೆ ಬಿದ್ದು ಶಿಕ್ಷಣದ ಸಂರಚನೆ ಹಿಂದೆಂದೂ ಮುಟ್ಟಿರದ ಅವ್ಯವಸ್ಥೆ, ಅದಕ್ಷತೆ, ಅವ್ಯವಹಾರಗಳ ಕೂಪವಾಗಿದೆ. ಕಾರಣಗಳೇನು? ಕರ್ತೃಗಳು ಯಾರು? ಶಕ್ತಿಗಳು ಯಾವುವು?

ಈ ಕರ್ತೃ-ಕಾರಣ ಸಂಬಂಧದಿಂದ ನಿರಪರಾಧಿ-ಮುಗ್ಧ ಜನ ಸಮುದಾಯ ಹೇಗೆ ನರಳುತ್ತಿದೆ? ಎಂಬ ಪ್ರಶ್ನೆಗಳು ಕರಾಳಪತ್ರದ ವ್ಯಾಪ್ತಿ. ಸರಕಾರದ ದಾಖಲೆಗಳಿಂದ, ದಿನಪತ್ರಿಕೆಗಳ ವರದಿಗಳಿಂದ, ಪ್ರತ್ಯಕ್ಷ ನಿರೀಕ್ಷಣೆಯಿಂದ ಗಮನಕ್ಕೆ ಬಂದಂತಹ ಸಂಗತಿಗಳ ತಾರ್ಕಿಕ ಜೋಡಣೆ ಮಾತ್ರ ಇದು. ಇದೇ ವಿಶ್ಲೇಷಣೆಯೂ ಹೌದೇನೋ? ಅಂಕಿ-ಅಂಶಗಳಲ್ಲಿ ಸ್ವಲ್ಪ ಏರಿಕೆಯಿರಬಹುದು, ಅಲ್ಪ ಇಳಿತ ಕೂಡಾ. ಕೆಲ ಸಂಗತಿಗಳು ಬಿಟ್ಟು ಹೋಗಿರಲಿಕ್ಕೆ ಸಾಕು, ಅವ್ಯಾವುವೂ ಕರಾಳ ಪತ್ರದ ದುರ್ಬಲತೆಯಾಗಲಾರವು. ಕರಾಳ ಪತ್ರವು ಶಿಕ್ಷಣರಂಗದ ದುಃಸ್ಥಿತಿಯತ್ತ ಒಂದು ಕ್ಷ-ಕಿರಣ, ಕಂದರ-ಕೊರಕಲಿನತ್ತ ಅಪಾಯದ ತೋರ್ಬೆರಳು, ಅಸ್ಥಿಪಂಜರಗಳತ್ತ ದಿಗ್ಭ್ರಮಿತ ದೃಷ್ಟಿ, ಉಳಿದದ್ದು ಈ ನಾಡಿನ ವಿಚಾರವಂತರು, ಶಿಕ್ಷಣ ತಜ್ಞರು, ಶಿಕ್ಷಣ ಪ್ರೇಮಿಗಳು, ವಿದ್ಯಾರ್ಥಿ ಸಮುದಾಯ ಮಾಡಬೇಕಾದಂತಹ ಅಳಿವು-ಉಳಿವಿನ ಸಂಶೋಧನೆ, ಹೋರಾಟ.

(ರಾಜ್ಯದ ವಿದ್ಯಾರ್ಥಿ ಸಮುದಾಯದ ಪ್ರತಿನಿಧಿಯಾಗಿ ಶಿಕ್ಷಣದ ಅರ್ಥ- ಅಸ್ತಿತ್ವಕ್ಕೆ ಒದಗಿರುವ ಸಮಸ್ಯೆಗಳ ಈ ಕೊಡಲಿಯೇಟುಗಳನ್ನು ನಿವಾರಿಸಲು ಸೆಪ್ಟೆಂಬರ್ 5, 86ರಂದು ವಿದ್ಯಾರ್ಥಿ ಪರಿಷತ್ 'ಶಿಕ್ಷಣ ಉಳಿಸಿ' ಹೋರಾಟವನ್ನು ಪ್ರಾರಂಭಿಸಿತು.) ಕಲಿಕೆಯ ರಂಗದ ಸುಧಾರಣೆಯ ಮಾತುಗಳನ್ನು ಆಡುತ್ತ ಪ್ರತಿ ಹಂತ - ಹೆಜ್ಜೆಗಳಲ್ಲೂ ರಾಜ್ಯ ಸರ್ಕಾರ ನಾಡಿನ ಜನತೆಗೆ ಅನ್ಯಾಯ ಮಾಡಿರುವುದನ್ನು, ಕರ್ತವ್ಯದಲ್ಲಿ ವಿಫಲಗೊಂಡಿರುವುದನ್ನು ದಾಖಲಿಸಲು, ಶಿಕ್ಷಣ ರಂಗದ ಸದ್ಯದ ವಿಷಮಸ್ಥಿತಿಯನ್ನು ಅಂಕಿ-ಅಂಶಗಳ ಸಹಿತ ವಿದ್ಯಾರ್ಥಿ - ಜನತೆಯ ಮುಂದಿಡಲು (ನವೆಂಬರ್ 22, 23- 1987 ರಂದು ದಾವಣಗೆರೆಯಲ್ಲಿ ನೆರವೇರಿದ 11ನೆಯ ರಾಜ್ಯ ಸಮ್ಮೇಳನದಲ್ಲಿ ನಿರ್ಣಯವೊಂದರ ಮೂಲಕ ಕರಾಳ ಪತ್ರವನ್ನು ಪ್ರಕಟಿಸುವ ನಿರ್ಧಾರವನ್ನು ಕೈಗೊಂಡಿತು. ಇದು ಇತಿಹಾಸ. ನಮ್ಮ ಹೋರಾಟ, ರಾಜ್ಯ ಸರ್ಕಾರ ಅಥವಾ ಅದರ ನೇತೃತ್ವದ ವಿರುದ್ಧವಲ್ಲ. ರಾಜಕೀಯ ಹಿತಾಸಕ್ತಿ ನಮಗಿಲ್ಲ. ನಾಳಿನ ಲಕ್ಷಾಂತರ ಎಳೆಯರ ಬಾಳಿಗೆ ಬೆಳಕನ್ನೀಯಬೇಕಾದ ಶಿಕ್ಷಣ, ಸರ್ಕಾರದ ತಪ್ಪು ಹೆಜ್ಜೆಗಳಿಂದಾಗಿ ಅವರನ್ನು ಕತ್ತಲ ಕಂದರಕ್ಕಿಳಿಸುತ್ತಿದೆ. ಈ ಕರಾಳ ವಾಸ್ತವಿಕತೆಯತ್ತ ನ್ಯಾಯದ ದೀವಿಗೆ ಬೆಳಕನ್ನು ಚೆಲ್ಲಲು, ಆ ಬೆಳಕಿನಾಧಾರದಿಂದ ಶಿಕ್ಷಣ ಉಳಿಸಿ ಹೋರಾಟವನ್ನು ನಿರ್ಮಿಸಲು ನಾಡಿನ ಲಕ್ಷ ಲಕ್ಷ ಯುವಕರ ಕಿಚ್ಚು ನ್ಯಾಯದ ಹೋರಾಟಕ್ಕೆ ಧುಮುಕುವಂತೆ, ಜ್ವಾಲೆಯಾಗುವಂತೆ ಪ್ರೇರೇಪಿಸುವ ಈ ಕರಾಳಪತ್ರ ನವಯುಗಕ್ಕೆ ಬೆಳಕಿಂಡಿ. ಬೆಳಕಿನತ್ತ ಮುನ್ನಡೆ.

(ಮುಂದುವರಿಯುವುದು)

## ಅಭಿಪ್ರಾಯ

### ಅನಂತಕುಮಾರರ ಅಸಾಧಾರಣ ಕೊಡುಗೆ

ಅನಂತಕುಮಾರ್ ಒಬ್ಬ ಅಸಾಮಾನ್ಯ ವ್ಯಕ್ತಿ. ಹಳ್ಳಿಯ ಒಂದು ಸಾಧಾರಣ ಮನೆತನದಲ್ಲಿ ಹುಟ್ಟಿ, ಈ ಮಟ್ಟಿಗೆ ಕೆಲಸ ಮಾಡಬೇಕಿದ್ದರೆ ಅವರ ಹುಟ್ಟುಗುಣವೇ ಕಾರಣ. ಅವರಿಗೆ ಕಲೆ, ಸಂಸ್ಕೃತಿ, ಕನ್ನಡಾಭಿಮಾನ, ಶಿಕ್ಷಣ, ಸಾಹಿತ್ಯ, ರಾಜಕೀಯ, ಸಾಮಾಜಿಕ ಕಳಕಳಿ, ಎಲ್ಲ ತರಹದ ಜನರೊಂದಿಗೆ ಆತ್ಮೀಯವಾಗಿ ಬೆರೆಯುವ ಗುಣ ಎದ್ದು ಕಾಣಿಸುತ್ತಿತ್ತು. ಈ ಎಲ್ಲ ಗುಣಗಳಿಂದಲೇ ಅವರು 6 ಸಲ ಲೋಕಸಭಾ ಸದಸ್ಯರಾಗಿ ಗೆಲ್ಲಲಿಕ್ಕೆ ಸಾಧ್ಯವಾಯಿತು. ತಮ್ಮ ಎಲ್ಲ ಬಂಧು-ಬಳಗದವರ ಜೊತೆಗೂಡಿಸಿಕೊಂಡು ಸಮಾಜದ ಕೆಲಸ ಮಾಡುತ್ತಿದ್ದರು. ಇದು ಬಹಳ ಅಪರೂಪ. ಅವರು ಮಹಿಳೆಯರಿಗೆ ಹೆಚ್ಚಿನ ಆದ್ಯತೆ ಕೊಡುತ್ತಿದ್ದರು. ತಮ್ಮ ಪತ್ನಿಯನ್ನು ಇಡೀ ಭಾರತದಲ್ಲಿ "ಸಮಾಜ ಕಾರ್ಯಕರ್ತೆ" ಎಂದು ಗುರುತಿಸುವಷ್ಟರ ಮಟ್ಟಿಗೆ ಬೆಳೆಸಿದ್ದಾರೆ. ಅವರು ಮೊದಲ ಲೋಕಸಭಾ ಸದಸ್ಯರಾದಾಗ "ಅದಮ್ಯ ಚೇತನ" ಪ್ರಾರಂಭ ಮಾಡಿದ್ದರು. ಸರಕಾರಿ ಶಾಲೆಗಳು ಅಧೋಗತಿಗೆ ಇಳಿದಿದ್ದವು. ಅದನ್ನು ಸರಿಪಡಿಸಲು ಬಿಸಿಯೂಟ, ಸಂಸ್ಕಾರ, ಶಿಕ್ಷಣ ಒಟ್ಟಿಗೆ ಶುರು ಮಾಡಿ, ಸರಕಾರಿ ಶಾಲೆಯ ಚಿತ್ರವನ್ನೇ ಬದಲಾಯಿಸಿದ್ದಾರೆ. "ಅದಮ್ಯ ಚೇತನ" ಲಕ್ಷ ಜನರಿಗೆ ಅಡುಗೆ ಮಾಡಿದರೂ, ಒಂದು ಚೂರು ಕಸ ಹೊರಗೆ ಹೋಗದೇ ರಿಸೈಕಲ್ ಮಾಡುತ್ತಿದೆ. ಕಲೆ. ಸಾಹಿತ್ಯ, ಧಾರ್ಮಿಕ, ಸಮಾಜದ ಎಲ್ಲ ತರಹದ ಚಟುವಟಿಕೆಗಳನ್ನು ತುಂಬಾ ಯಶಸ್ವಿಯಾಗಿ ಮಾಡುತ್ತಿದೆ.

-ಅರುಣಾ ಠಕಾರ

# ಬುಗುರಿ ಮರ

ಸಸ್ಯಲೋಕ ಪರಿಚಯ ಮಾಲಿಕೆ- 27



ಹೃದಯದಾಕಾರದ ಹೊಳಪುಳ್ಳ ಎಲೆಗಳು, ಬುಗುರಿಯಾಕಾರದ ಕಾಯಿಗಳು, ಬಿಡಿಸಿದ ಕೊಡೆಯ ಆಕಾರದಲ್ಲಿ ಬೆಳೆದು ಅತ್ಯಂತ ಆಕರ್ಷಕವಾಗಿ ಕಾಣುವ ಈ ಮರದ ಹೆಸರು - ಬುಗುರಿ. ತಿಳಿಹಳದಿ ಬಣ್ಣದ, ದಿನಗಳೆದಂತೆ ಊದಾ ಬಣ್ಣಕ್ಕೆ ತಿರುಗುವ ಹೂವುಗಳನ್ನು ಹೊಂದಿರುವ ಈ ಮರವನ್ನು 'ಹೂವರಸಿ' ಎಂದೂ ಕರೆಯುತ್ತಾರೆ. ಇದು ಹೆಸರಿಗೆ ತಕ್ಕಂತೆ ಹೂಗಳ ರಾಣಿ. ತುಂಬಾ ಅಭಿಮಾನದ ಸಂಗತಿ ಎಂದರೆ ಈ ಮರದ ಮೂಲ ಭಾರತವಾಗಿದ್ದು, ಇದು ಪಶ್ಚಿಮ ಕರಾವಳಿ, ಬಂಗಾಳ, ಅಂಡಮಾನ್, ಮೈಸೂರು, ಚೆನ್ನೈ ಮುಂತಾದ ಪ್ರದೇಶಗಳಲ್ಲಿ ಹೇರಳವಾಗಿ ಬೆಳೆಯುತ್ತದೆ.

ಮಾಲ್ವೇಸಿ ಕುಟುಂಬದ ಥೆಸ್ಪೀಸಿಯ ಪಾಪ್ಸಲಿನ ಎಂಬ ವೈಜ್ಞಾನಿಕ ಹೆಸರಿನ ಈ ಸಸ್ಯವು ಮರಳುಮಿಶ್ರಿತ ನೆಲದಲ್ಲಿ ಬಲು ಸೊಂಪಾಗಿ ಬೆಳೆಯುತ್ತದೆ. ಇವುಗಳನ್ನು ರಸ್ತೆಗಳ ಇಕ್ಕೆಲಗಳಲ್ಲೂ ಸಾಲುಮರಗಳಾಗಿ ಬೆಳೆಸಬಹುದು. ೯-೧೮ ಮೀಟರ್ ಎತ್ತರಕ್ಕೆ ಬೆಳೆಯುವ ಮರಗಳಿಗೆ ಕಾಯಿಗಳು ಅಂಟಿಕೊಂಡೇ ಇರುವುದನ್ನು ಕಾಣಬಹುದು. ನಿತ್ಯ ಹರಿದ್ವರ್ಣ ಸಸ್ಯದ ಎಲೆಗಳು ಪರ್ಯಾಯ ಮಾದರಿಯಲ್ಲಿ ಕಾಣಿಸುತ್ತವೆ. ಬೀಜಗಳಿಂದ ಬೆಳೆಯುವ ಸಸ್ಯವಿದು. ಕಾಂಡಗಳ ಮೂಲಕವೂ ಬೆಳೆಸಬಹುದು.

**ಉಪಯೋಗಗಳು:** ಗಟ್ಟಿಯಾಗಿರುವ ಈ ಮರದ ಕಾಂಡವು ನೀರಿಗೆ ಹಾಳಾಗುವುದಿಲ್ಲ. ಹೀಗಾಗಿ ಇದನ್ನು ದೋಣಿಯ ಹುಟ್ಟು, ಬಂದೂಕದ ಹಿಡಿ, ಲಾಳಿಗಳು, ಸಂಗೀತದ ಉಪಕರಣಗಳು, ಗಾಡಿಯ ಚಕ್ರ, ಪಟ್ಟಿಗಳು ಹಾಗೂ ಕೃಷಿಯಲ್ಲಿ ನೇಗಿಲು, ಕುಂಟೆ, ನೇಗಿಲು ಹಿಡಿ ಮುಂತಾದ ಉಪಕರಣಗಳನ್ನು ತಯಾರಿಸಲು ಬಳಸುತ್ತಾರೆ. ತೊಗಟೆಯ ನಾರಿನಿಂದ ದೊಡ್ಡದೊಡ್ಡ ಒರಟಾದ ಹಗ್ಗಗಳನ್ನು ತಯಾರಿಸಬಹುದು. ಈ ಮರದ ಬೀಜಗಳಿಂದ ತೆಗೆದ ಎಣ್ಣೆಯನ್ನು ಹಿಪ್ಪೆ ಎಣ್ಣೆಯ ಜೊತೆ ಸೇರಿಸಿ ಬಳಸುತ್ತಾರೆ. ಉಣ್ಣೆ ಹಾಗೂ ರೇಷ್ಮೆ ಬಟ್ಟೆಗಳಿಗೆ ಬಳಸುವ ಹಳದಿ ಬಣ್ಣ ತಯಾರಿಕೆಗೆ ಇವುಗಳ ಹೂವುಗಳನ್ನು ಬಳಸುತ್ತಾರೆ. ಇದರ ಎಲೆಗಳು ದನಗಳಿಗೆ ಉತ್ತಮ ಮೇವು.

**ಔಷಧೀಯ ಬಳಕೆ :** ಕಾಯಿ, ಎಲೆ ಮತ್ತು ಬೇರುಗಳಿಂದ ಚೂರ್ಣ ತಯಾರಿಸಿ, ಬಿಳಿ ಹುಲಿಸೊಪ್ಪಿನ ಚೂರ್ಣದೊಂದಿಗೆ ಸೇರಿಸಿ, ಕಜ್ಜಿ ಮುಂತಾದ ಚರ್ಮರೋಗಗಳಿಗೆ ಉಪಯೋಗಿಸುತ್ತಾರೆ. ಈ ಮರದ ಎಲೆಗಳು ಗಜಕರ್ಣ ಹಾಗೂ ಹುಳುಕಡ್ಡಿಗೆ ರಾಮಬಾಣ. ಹಸಿರು ಕಾಯಿಗಳನ್ನು ಜಜ್ಜಿದರೆ ಹಳದಿ ಹಾಲು ಬರುತ್ತದೆ. ಆ ಹಾಲನ್ನು ಒಂದು ವಾರ ಕಾಲ ಹಚ್ಚಿದರೆ ಗಜಕರ್ಣ ವಾಸಿಯಾಗುತ್ತದೆ. ಹಣ್ಣಿನಲ್ಲಿ ಬ್ಯಾಕ್ಟೀರಿಯ ವಿರೋಧಿ ಗುಣವುಳ್ಳ ಸತ್ವವಿರುವುರಿಂದ ಹಣ್ಣುಗಳನ್ನೂ ತೊಗಟೆ, ಬೇರುಗಳನ್ನೂ ಅತಿಸಾರ, ಕಾಲರ, ಮೂಲವ್ಯಾಧಿಗಳ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ.



● **ಛಾಯಾ ಓಕ್ ಬಾಪಟ್**

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಹಸಿರು ಭಾನುವಾರದ ಸಂಖ್ಯೆ | ಸ್ಥಳ | ಭಾಗವಹಿಸಿದವರು | ನೆಡಲಾದ ಗಿಡಗಳ ಸಂಖ್ಯೆ/ ಚಟುವಟಿಕೆಗಳು |
|---|---|---|---|
| **412** **19/11/23** | ಬೆಂಗಳೂರು ವಿ.ವಿ. ಬಯೋ ಪಾರ್ಕ್ | ಸೊಸೈಟಿ ಜನರಾಲ್, ಯೂಥ್ ಫಾರ್ ಸೇವಾ, ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು, ಸ್ಥಳೀಯರು. | 10 ಗಿಡಗಳು |
| **413** **26/11/23** | ಬೆಂಗಳೂರು ವಿ.ವಿ. ಬಯೋ ಪಾರ್ಕ್ | ಸೊಸೈಟಿ ಜನರಾಲ್, ಯೂಥ್ ಫಾರ್ ಸೇವಾ, ಬಿಎಂಎಸ್ ಹಾಗೂ ಎಂಎಲ್ಎ ಕಾಲೇಜು ವಿದ್ಯಾರ್ಥಿಗಳು, ಕಲ್ಪವೃಕ್ಷ ಚಾರಿಟೇಬಲ್ ಸಂಸ್ಥೆಯ ಮಕ್ಕಳು, ಹಸಿರು ಯೋಧರು, ಸ್ಥಳೀಯರು, ಅದಮ್ಯ ಚೇತನ ಸಂಸ್ಥೆಯ ಸಿಬ್ಬಂದಿ. | 10 ಗಿಡಗಳು |
| **414** **03/12/23** | ಬೆಂಗಳೂರಿನ ಜಾಲಹಳ್ಳಿಯ ಹೆಚ್.ಎಂ.ಟಿ. ಮೈದಾನ | ಊಟ ಫ್ರಮ್ ತೋಟ, ಗಾರ್ಡನ್ ಸಿಟಿ ಫಾರ್ಮರ್ಸ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಸಾವಯವ ಕೃಷಿ ಮಹತ್ವ , ಹಸಿರು ಜೀವನಶೈಲಿಯ ಬಗ್ಗೆ ತಿಳಿಸಲಾಯಿತು. ಶ್ರೀ ರಾಜೇಂದ್ರ ಹೆಗಡೆ, ಬಿಎಂಎಸ್ ಹಾಗೂ ಎಂಎಲ್ಎ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು, ಅದಮ್ಯ ಚೇತನ ಸಿಬ್ಬಂದಿ ಹಾಗೂ ಸ್ಥಳೀಯರು. | 15 ಗಿಡಗಳು |
| **415** **10/12/23** | ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯ ಮಾರಗೊಂಡನಹಳ್ಳಿ ಕೆರೆಯ ಬದಿ | ಐಐಟಿ ಕಾನ್ಪುರದ ಸುಜೀತ್‌ಕುಮಾರ್, ಐಐಎಫ್ ಸಂಸ್ಥೆಯ ಎಂ ವೆಂಕಟೇಶ್, ಸೊಸೈಟಿ ಜನರಾಲ್, ಬೆಂಗಳೂರಿನ ಬಿಎಂಎಸ್ ಕಾಲೇಜು, ನೃಪತುಂಗ ವಿ.ವಿ, ಮಲ್ಲೇಶ್ವರದ ಎಂಎಲ್ಎ ಕಾಲೇಜು ವಿದ್ಯಾರ್ಥಿಗಳು, ಗ್ರೀನ್ ವಾಲೆಂಟಿಯರ್ಸ್ ಹಾಗೂ ಸ್ಥಳೀಯರು. | 50 ಗಿಡಗಳು, ಈ ಹಿಂದೆ ನೆಟ್ಟಿದ್ದ ಗಿಡಗಳ ಬುಡದ ಕಳೆ ಕಿತ್ತು, ನೀರುಣಿಸಲಾಯಿತು. |

ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Venkatesh Manu / Trivikram Joshi**
Inputs: **Poornaprajna / Srikanth K / AKP**
Photographs: **Gopal TS / Internet Sources / AKP / ACF**
Acknowledgements: **Justice N Kumar / Niranjana Shetty / Chaya Bapat**
Sketch: **Raghupathi Sringeri** Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಗುರುವಾಗಿ ದಾರಿತೋರಿದ ಅನಂತ್ ಜೀ

ನಾನು ಮೂಲತಃ ಕರ್ನಾಟಕದವನು. ಆದರೆ, ನನ್ನ ತಂದೆ-ತಾಯಿ ಮುಂಬೈಗೆ ಸ್ಥಳಾಂತರಗೊಂಡು ಹೋಟೆಲ್ ವ್ಯವಹಾರ ಆರಂಭಿಸಿದ್ದರು. ನಾವು ವಾಸವಾಗಿದ್ದ ಪ್ರದೇಶದಲ್ಲಿ ಹೆಚ್ಚು ಕಾರ್ಖಾನೆಗಳಿದ್ದವು. ವ್ಯವಹಾರವೂ ಚೆನ್ನಾಗಿ ನಡೆದಿತ್ತು. ನನ್ನ ತಂದೆ ಉದಾರಿಗಳು. 1970ರ ವರ್ಷ; ಬಹುತೇಕ ಮಿಲ್‌ಗಳು ಬಂದ್ ಆಗುತ್ತಿದ್ದವು. ನಮ್ಮ ರೆಸ್ಟೋರೆಂಟ್ ಗೆ ಬಂದು ಊಟ ಮಾಡುತ್ತಿದ್ದ ಕಾರ್ಮಿಕರು ಸಂಕಷ್ಟದಲ್ಲಿದ್ದರು. ಆಗ ನಮ್ಮ ತಂದೆ ಅವರಲ್ಲಿ ಬಿಲ್ ಕೇಳುತ್ತಿರಲಿಲ್ಲ. ಹೀಗೆಂದು ನಮ್ಮ ತಾಯಿ ಹೇಳುತ್ತಿದ್ದಳು. ನನ್ನ ತಂದೆ ತೀರಿಕೊಂಡಾಗ ನಾನಿನ್ನೂ ಬಹಳ ಚಿಕ್ಕವನಿದ್ದೆ.

1990ರಲ್ಲಿ ನಾನು ಬಿಜೆಪಿ ಹಾಗೂ ಸಂಘ ಪರಿವಾರದ ಶಾಖೆಗಳಲ್ಲಿ ಕೆಲಸ ಮಾಡಲು ಆರಂಭಿಸಿದೆ. ಅನೇಕ ವರ್ಷಗಳ ಕಾಲ ಕೆಲಸ ಮಾಡಿದೆ. ಮುಖಂಡ ನರೇಂದ್ರ ಪರೀಖ್ ನನ್ನನ್ನು ಬಿಜೆಪಿಗೆ ಕರೆತಂದರು. ಸಂಘದ ಶಿಕ್ಷಕ ಆದಿತ್ಯ ರಾಠಿ, ನನ್ನನ್ನು ಶಾಖೆಗೆ ಕರೆದೊಯ್ಯುತ್ತಿದ್ದರು. ನನಗೆ ಗುರು ಎಂಬುವವರು ಇರಲಿಲ್ಲ. 2014ರಲ್ಲಿ ಕರ್ನಾಟಕ ಬಿಜೆಪಿಯ ಅಧ್ಯಕ್ಷರಾದ ಅನಂತಕುಮಾರರಿಗೆ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಹೊಣೆಗಾರಿಕೆ ನೀಡಲಾಯಿತು. ಸಂಜಯ್ ಉಪಾಧ್ಯಾಯ ಹಾಗೂ ನನ್ನನ್ನು ಅವರಿಗೆ ಸಹಾಯಕರನ್ನಾಗಿ ನಿಯುಕ್ತಿ ಮಾಡಿದರು. ನಾವಿಬ್ಬರೂ ಸ್ವಂತ ಸಾಮರ್ಥ್ಯದಿಂದ ಮೇಲೆ ಬಂದವರು, ನಿಷ್ಠಾವಂತ ಕಾರ್ಯಕರ್ತರು, ನಮಗೆ ಯಾವುದೇ ಗುರುಗಳಿಲ್ಲ ಮತ್ತು ದೊಡ್ಡವರ ಆಶ್ರಯವೂ ಇಲ್ಲ ಎಂಬುದನ್ನು ಅನಂತಕುಮಾರರು ಗಮನಿಸಿದ್ದರು. ಹೀಗಾಗಿ, 'ಇವತ್ತಿನಿಂದ ನಾನು ನಿಮಗೆ ಗುರು. ನಿಮಗೆ ಯಾವುದೇ ಒಳ್ಳೆಯ, ಕೆಟ್ಟ,  ಯಾವುದೇ ಸಮಸ್ಯೆಗಳಿದ್ದರೂ ನನ್ನನ್ನು ಗುರು ಎಂದು ನಂಬಿ, ಎಲ್ಲವನ್ನೂ ಹೇಳುತ್ತಿರಬೇಕು' ಎಂದಿದ್ದರು. ಅಂದಿನಿಂದ ಅನಂತಕುಮಾರರೊಂದಿಗೆ ನಮ್ಮ ಸಂಪರ್ಕ ಹೆಚ್ಚಿತು. ಕೇಂದ್ರದಲ್ಲಿ ಅವರು ವಿವಿಧ ಹುದ್ದೆಗಳನ್ನು ನಿರ್ವಹಿಸುವಾಗ ತಮ್ಮ ಅಧಿಕಾರಿಗಳಿಗೆ ಹಾಗೂ ಗೇಟ್‌ಕೀಪರ್ ಗಳಿಗೂ ಸಹ ನಮ್ಮ ಬಗ್ಗೆ ಮಾಹಿತಿ ನೀಡಿರುತ್ತಿದ್ದರು. "ಇಂತಿಂಥವರು ಬಂದರೆ ನೇರವಾಗಿ ಮನೆಯಲ್ಲಿ ಕೂಡಿಸಬೇಕು. ಊಟ ಮಾಡದೇ ಹೋಗಬಾರದು. ಅವರು ಯಾವುದಾದರೂ ಮಂತ್ರಿಗಳನ್ನು ಭೇಟಿಯಾಗುವುದಿದ್ದರೆ, ಮೊದಲು ನಮ್ಮ ಕಚೇರಿಯಿಂದಲೇ ಆ ಇಲಾಖೆಯ ಸಚಿವರಿಗೆ ಫೋನ್ ಮಾಡಬೇಕು. ಕೆಲಸ ಮಾಡಿಸಿಕೊಡಬೇಕು" ಎಂದು ಸೂಚನೆ ನೀಡಿದ್ದರು.




ನಾನು ಇಂಡಿಯನ್ ಹೋಟೆಲ್ ಅಸೋಸಿಯೇಶನ್ ನೇತೃತ್ವ ವಹಿಸಿದ್ದೆ. "ಶೇ. 18ರಷ್ಟು ಜಿಎಸ್‌ಟಿ ಅತೀ ಹೆಚ್ಚಾಯಿತು. ಕನಿಷ್ಠ ತೆರಿಗೆ ವಿಧಿಸಬೇಕು"ಎಂಬುದು ನಮ್ಮ ಆಗ್ರಹವಾಗಿತ್ತು. ಒಂದು ನಿಯೋಗ ತೆಗೆದುಕೊಂಡು ದೆಹಲಿಗೆ ಹೋಗಿದ್ದೆವು. ಅನಂತಕುಮಾರರು ಹೇಳಿದರು. 'ಒಂದು ದಿನದ ಮಟ್ಟಿಗೆ ನಿಯೋಗವನ್ನು ತೆಗೆದುಕೊಂಡು ಬಂದರೆ ಕೆಲಸ ಆಗುವುದಿಲ್ಲ, ಶೆಟ್ಟಿಯವರೇ, ನೀವು 6-7ದಿನ ಇರಬೇಕು. ಇಲ್ಲಿಗೆ ಬಂದಿದ್ದಕ್ಕೂ ಸಾರ್ಥಕವಾಗುತ್ತದೆ' ಎಂದರು. ಅವರು ಹೇಳಿದ ಹಾಗೆ, ನಮ್ಮ ಅಸೋಸಿಯೇಶನ್‌ನ ದೆಹಲಿ ವಿಭಾಗದ ಅಧ್ಯಕ್ಷರನ್ನು ಕರೆದುಕೊಂಡು ಹೋಗಿದ್ದೆ. ಅವರು ಹಣಕಾಸು ವಿಭಾಗಕ್ಕೂ ಪ್ರಭಾರಿಯಾಗಿದ್ದರು. ನಾವು ಅನಂತಕುಮಾರರಿದ್ದಲ್ಲಿಗೆ ಹೋದೆವು. ಅವರು ನಮ್ಮನ್ನು ಪ್ರಧಾನಿ ಮೋದಿ ಅವರಿದ್ದಲ್ಲಿಗೆ ಕರೆದೊಯ್ದರು. ಪ್ರಧಾನಿಯವರಿಗೆ ಅನಂತಕುಮಾರರು, ಈ ವಿಷಯವನ್ನು ತಿಳಿಸಿದರು. ಯಾವ ದಿನ ಜಿಎಸ್‌ಟಿ ಕುರಿತು ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಿತ್ತೋ, ಅಂದಿನ ರಾತ್ರಿ ನಾವು ಅನಂತಕುಮಾರರ ಕಚೇರಿಯಲ್ಲೇ ನಾನೂ ಹಾಗೂ ಸಂಜಯ್ ಉಪಾಧ್ಯಾಯ ಇದ್ದೆವು. ಅನಂತಕುಮಾರರು ಬಹಳಷ್ಟು ಮುಖಂಡರು, ತಜ್ಞರೊಂದಿಗೆ ಚರ್ಚೆ ನಡೆಸಿದ್ದರು. ಯಾವುದೇ ಕಾರಣಕ್ಕೂ, ಆ ಬಿಲ್ ಪಾಸ್ ಆಗಬೇಕಿತ್ತು. ರಾತ್ರಿ 2-3 ಗಂಟೆಯವರೆಗೂ ಅಲ್ಲಿಯೇ ಕುಳಿತಿದ್ದೆವು.

ನನ್ನ ಹಾಗೂ ಸಂಜಯ್ ಉಪಾಧ್ಯಾಯರ ಮೇಲೆ ಅನಂತಕುಮಾರರಿಗೆ ತುಂಬಾ ನಂಬಿಕೆ ಇತ್ತು. ಏಕೆಂದು ನಮಗೂ ತಿಳಿದಿಲ್ಲ. ಅವರು ಮುಂಬೈಗೆ ಬಂದಾಗ ಸಂಜಯ್ ಮತ್ತು ನಮ್ಮ ಮನೆಗಳಿಗೆ ಬಂದಿದ್ದರು. ಯಾವುದೇ ಹೋಟೆಲ್‌ನಲ್ಲಿ ಊಟ ಮಾಡಲಿಲ್ಲ. ಅವರಿಗೆ ಯಾವುದು ಇಷ್ಟವೋ ಆ ಆಹಾರವನ್ನು ನಾವು ತಯಾರಿಸಿಕೊಟ್ಟಿದ್ದೆವು. ನಂತರ, 'ಇಷ್ಟೊಂದು ಸ್ವಾದಿಷ್ಟ ರುಚಿಕರ ಊಟವನ್ನು ನಾನು ನನ್ನ ಜೀವನದಲ್ಲೇ ತಿಂದಿದ್ದಿಲ್ಲ' ಎಂದು ಹೊಗಳಿದ್ದರು. ಕೇಂದ್ರ ಮಂತ್ರಿಯಾಗಿದ್ದೂ ನನ್ನಂತಹ ಸಾಧಾರಣ ಕಾರ್ಯಕರ್ತರ ಮನೆಯಲ್ಲಿದ್ದು ಇಂತಹ ಮಾತನಾಡುವುದೆಂದರೆ ನನ್ನ ಪಾಲಿಗೆ ಅದು ಸೌಭಾಗ್ಯವೇ ಸರಿ.



**ನಿರಂಜನ ಶೆಟ್ಟಿ**
ಭಾ ಜ ಪ ಕಾರ್ಯಕರ್ತರು, ಮುಂಬೈ

ಕೆಲವು ತಿಂಗಳಾದ ಮೇಲೆ ದೆಹಲಿಯ ಅವರ ಮನೆಯಲ್ಲಿ ನಾನು ಅವರನ್ನು ಭೇಟಿಯಾಗಿದ್ದೆ. "ನಿನ್ನ ಆಯುಸ್ಸು 60 ವರ್ಷ ಮಾತ್ರ. ಒಂದು ವೇಳೆ, 60 ವರ್ಷ ದಾಟಿದೆ ಎಂದರೆ ನೀನು ಬಹಳ ದೊಡ್ಡ ವ್ಯಕ್ತಿಯಾಗುವೆ. ಆದರೆ, ನೀನು ಎಂದೂ 60 ವರ್ಷ ದಾಟಲಾರೆ. ನಿನಗೆ ನಿನ್ನದೇ ಮನೆ ಕಟ್ಟಿಕೊಳ್ಳಲಾಗದು" ಹೀಗೆಂದು ತಮ್ಮ ತಂದೆಯವರು ಹೇಳಿದ್ದಾಗಿ ಅನಂತಕುಮಾರರು ಸ್ಮರಿಸಿಕೊಂಡರು. ಇದನ್ನು ನನಗೇಕೆ ಹೇಳುತ್ತಿದ್ದಾರೆ ಎಂಬುದು ನನಗೆ ಹೊಳೆದಿರಲಿಲ್ಲ.

ನಂತರ, ನಾನು ಮತ್ತು ಸಂಜಯ್ ಯಾವುದೋ ಕಾರ್ಯಕ್ರಮ ನಿಮಿತ್ತ ಬೆಂಗಳೂರಿಗೆ ಬಂದಿದ್ದಾಗ, ನಮ್ಮನ್ನು ಬೀಳ್ಕೊಡಲು ಸ್ವತಃ ಅನಂತಕುಮಾರರು ನಮ್ಮೊಂದಿಗೆ ಏರ್‌ಪೋರ್ಟ್‌ವರೆಗೆ ಬಂದಿದ್ದರು. ಯಲಹಂಕ ಬಳಿ ಒಂದು ಪ್ರದೇಶ ತೋರಿಸಿ, "ನನ್ನ ರಾಜಕೀಯ ನಿವೃತ್ತಿ ನಂತರ, ಬೆಳೆದು ದೊಡ್ಡವರಾದ ನನ್ನ ಮಕ್ಕಳೊಂದಿಗೆ ಈ ಸ್ಥಳದಲ್ಲಿ ಇರಲು ಬಯಸುತ್ತೇನೆ" ಎಂದಿದ್ದರು.

ನನ್ನ ತಾಯಿಯ ದೇಹಾಂತದ ನಂತರ ನಾನು ಕಣ್ಣೀರು ಸುರಿಸಿದ್ದು, ಅನಂತಕುಮಾರರ ದೇಹಾಂತವಾದಾಗ ಮಾತ್ರ. ಅನಂತಕುಮಾರರ ನಿಧನದ ಸುದ್ದಿ ತಿಳಿದ ತಕ್ಷಣ ನಾನು ಬೆಂಗಳೂರಿಗೆ ಬಂದೆ. ಅವರ ಅಂತಿಮ ದರ್ಶನ ಮಾಡಿದೆ. ಇವತ್ತಿಗೂ ಅವರ ಫೋನ್ ನಂಬರ್ ಡಿಲೀಟ್ ಮಾಡಿಲ್ಲ. ಅವರು ನನ್ನೊಂದಿಗೆ ಮಾತನಾಡಬಹುದು. ಅಲ್ಲದೆ, ವೈನಿಯವರೊಂದಿಗೂ ಮಾತನಾಡಬಹುದು ಎಂದು ಇಂದಿಗೂ ಅನಿಸುತ್ತಿದೆ. ಇವತ್ತಿಗೂ ಅನಂತಕುಮಾರರ ಬಗ್ಗೆ ಮಾಧ್ಯಮಗಳಲ್ಲಿ ಏನಾದರೂ ಸುದ್ದಿ ಬರುತ್ತಿದ್ದರೆ ಆ ಬಗ್ಗೆ ನಾನು ವೈನಿಯವರಿಗೆ ಶೇರ್ ಮಾಡುತ್ತೇನೆ. ಜೀವನದಲ್ಲಿ ಒಂದು ಉತ್ತಮ ಅವಕಾಶ ಸಿಕ್ಕರೆ ಅನಂತಕುಮಾರರಂತೆ ಕೆಲಸ ಮಾಡಿ ತೋರಿಸಬೇಕು. ಇದು ಅವರು ನೀಡಿದ ಸಂದೇಶವೂ ಆಗಿದೆ ಎಂದು ನಾನು ಭಾವಿಸುತ್ತೇನೆ. ಅನಂತಕುಮಾರರು 'ಅದಮ್ಯ ಚೇತನ'ದಂತಹ ಸಂಸ್ಥೆ ಸ್ಥಾಪಿಸಿದ್ದಾರೆ. ನಾನೂ ಸಹ ಮುಂಬೈಯಲ್ಲಿ ಅಂತಹ ಸಂಸ್ಥೆ ಸ್ಥಾಪಿಸುವ ಮೂಲಕ ಅನಂತಕುಮಾರರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತೇನೆ.

ಪುಟ 6 ರಿಂದ

## ಉಕ್ಕಿನ ಮನುಷ್ಯ ಸರ್ದಾರ್ ಪಟೇಲ್

ಅಧಿಕಾರಿಗಳಿಗೆ ರಾಜಕಾರಣಿಗಳ ಅನಪೇಕ್ಷಿತ ಪ್ರಭಾವದಿಂದ ರಕ್ಷಣೆ ಒದಗಿಸಿದರು. ಉಕ್ಕಿನ ಮನುಷ್ಯ, ಪಟೇಲರು ೧೫ ಡಿಸೆಂಬರ್ ೧೯೫೦ರಂದು ತಮ್ಮ ೭೫ನೇ ವಯಸ್ಸಿನಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾಗುವ ಹೊತ್ತಿಗೆ ದೇಶಕ್ಕೊಂದು ಭದ್ರ ಬುನಾದಿಯನ್ನು ಹಾಕಿದ್ದರು. ಪಟೇಲರ ಸೇವೆಗೆ ಸದಾ ಕೃತಜ್ಞವಾಗಿರುವ ಭಾರತವು ಅವರಿಗೆ ೧೯೯೧ರಲ್ಲಿ ಭಾರತರತ್ನ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಿ ಗೌರವಿಸಿತು. ಅವರ ನೆನಪಿನಲ್ಲಿ ಅನೇಕ ಅಂಚೆಚೀಟಿಗಳನ್ನು ಹೊರತರಲಾಗಿದೆ. ಅವರ ಹೆಸರಿನಲ್ಲಿ ರಾಷ್ಟ್ರೀಯ ಸ್ಮಾರಕವನ್ನು ಅಹಮದಾಬಾದಿನಲ್ಲಿ ನಿರ್ಮಿಸಲಾಗಿದೆ. ಸರ್ದಾರ್ ಸರೋವರ ಅಣೆಕಟ್ಟು, ಅದರ ಬಳಿ ೧೮೨ ಅಡಿ ಎತ್ತರದ ಕಬ್ಬಿಣದ ಪ್ರತಿಮೆ, ಪಟೇಲರಿಗೆ ಸಮರ್ಪಿಸಿದ ಸೂಕ್ತ ಗೌರವಗಳಾಗಿವೆ. ವಿಮಾನ ನಿಲ್ದಾಣ, ಬೃಹತ್ ಕ್ರಿಕೆಟ್ ಸ್ಟೇಡಿಯಂ ಸೇರಿದಂತೆ ಅನೇಕ ಕಟ್ಟಡಗಳಿಗೆ, ಸಂಸ್ಥೆಗಳಿಗೆ ಅವರ ಹೆಸರನ್ನಿಡಲಾಗಿದೆ. ಅವರ ಜೀವನದ ಬಗ್ಗೆ, ವಿಚಾರಧಾರೆಯ ಬಗ್ಗೆ ವಿಪುಲವಾದ ಸಾಹಿತ್ಯವೂ ರಚನೆಯಾಗಿದೆ.

ದೇಶಕ್ಕೊಂದು ಅಭೇದ್ಯವಾದ ಉಕ್ಕಿನ ಚೌಕಟ್ಟನ್ನು ನಿರ್ಮಿಸಿಕೊಟ್ಟ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲರನ್ನು ಕೃತಜ್ಞತೆಯಿಂದ ಸ್ಮರಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಪಟೇಲರ ಬದುಕು ಪ್ರತಿಯೊಬ್ಬ ಯುವಕನಲ್ಲಿಯೂ ರಾಷ್ಟ್ರಪ್ರೇಮದ ಪಂಜನ್ನು ಹೊತ್ತಿಸುವುದರಲ್ಲಿ ಸಂದೇಹವಿಲ್ಲ.

-ಕೆ. ಜನಾರ್ದನ ತುಂಗ

# ಅದಮ್ಯಚೇತನ ತಿಂಗಳ ವರದಿ (15 ನವೆಂಬರ್ 2023 ರಿಂದ 15 ಡಿಸೆಂಬರ್ 2023)



**ಉನ್ನತ ಗುರಿ ಸಾಧನೆಯ ಛಲವಿರಲಿ:** ಬದುಕಿನಲ್ಲಿ ಉನ್ನತ ಗುರಿ ಸಾಧಿಸುವ ಛಲವಿರಬೇಕು ಎಂದು ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಸೌತ್ ಎಂಡ್ ಸರ್ಕಲ್ ನಲ್ಲಿರುವ ಅನಂತ ಪ್ರೇರಣಾ ಕೇಂದ್ರಕ್ಕೆ ಹಾಗೂ ಗವಿಪುರದ ಅದಮ್ಯ ಚೇತನ ಸಂಸ್ಥೆಯ "ಅನ್ನಪೂರ್ಣ" ಬೃಹತ್ ಅಡುಗೆ ಮನೆಗೆ 2023ರ ಡಿ. 4 ರಂದು ಭೇಟಿ ನೀಡಿದ ಜಯನಗರದ ಕಮ್ಯುನಿಟಿ ಸೆಂಟರ್ ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಅದಮ್ಯ ಚೇತನದ ಸಭಾಂಗಣದಲ್ಲಿ ಅವರು ಮಾತನಾಡಿದರು. ಬದುಕಿನಲ್ಲಿ ಉನ್ನತ ಗುರಿ ಇರಬೇಕು. ನಮ್ಮಿಂದೇನಾದೀತು ಎಂಬ ಕೀಳರಿಮೆ ಇರಬಾರದು ಎಂದು ಹೇಳಿದರು. ಇದಕ್ಕೂ ಮುನ್ನ, ಈ ಎಲ್ಲ ವಿದ್ಯಾರ್ಥಿಗಳು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ ಚಿತ್ರಪ್ರದರ್ಶಿನಿ ಹಾಗೂ ಕಿರುಚಿತ್ರಗಳನ್ನು ವೀಕ್ಷಿಸಿ ಶ್ರೀ ಅನಂತಕುಮಾರ್ ಅವರ ಬಾಲ್ಯ, ಶಿಕ್ಷಣ, ರಾಜಕೀಯ ಸಾಧನೆಗಳ ಪರಿಚಯವನ್ನು ಪಡೆದುಕೊಂಡರು.

**ರಸಪ್ರಶ್ನೆ ಕಾರ್ಯಕ್ರಮ, ಪ್ರಮಾಣಪತ್ರ ವಿತರಣೆ:** ಅದಮ್ಯ ಚೇತನ ಹಾಗೂ ಅನಂತ ಪ್ರೇರಣಾ ಕೇಂದ್ರದಲ್ಲಿ ಪಡೆದ ಮಾಹಿತಿ ಆಧರಿಸಿ ವಿದ್ಯಾರ್ಥಿಗಳಿಗೆ "ರಸಪ್ರಶ್ನೆ" ಕಾರ್ಯಕ್ರಮ ಆಯೋಜಿಸಲಾಗಿತ್ತು. ಎಲ್ಲ ವಿದ್ಯಾರ್ಥಿಗಳಿಗೆ ಅದಮ್ಯ ಚೇತನ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು "ಅನಂತ ಕಿರಣ" ಪುಸ್ತಕ, ದೇಗುಲಗಳ ಮಾಹಿತಿ ಇರುವ ಬುಕ್‌ಮಾರ್ಕ್‌ಗಳು ಹಾಗೂ ಪ್ರಮಾಣಪತ್ರಗಳನ್ನು ನೀಡಿ ಪ್ರೋತ್ಸಾಹಿಸಿದರು.

**ಗಣ್ಯರ ಭೇಟಿ:** ಬೆಂಗಳೂರಿನ ಇನ್ಫೋಸಿಸ್ ಕಂಪನಿಯ ಹಿರಿಯ ಆರ್ಕಿಟೆಕ್ಟ್ ಜಗದೀಶ್, ಕುಮಟಾದ ಆರ್. ಎಸ್. ಎಸ್. ಮುಖಂಡ ಎಸ್. ಶಾನುಭಾಗ್ ಹಾಗೂ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಬಿಜೆಪಿ ಮುಖಂಡ ಅಂಬರೀಶ್ ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದರು. ಮಲ್ಲೇಶ್ವರದ U R ಅಕಾಡೆಮಿಯ ನಿರ್ದೇಶಕ ಡಾ। ಜಿ.ಕೆ. ಭಟ್ ಅವರು ಅದಮ್ಯ ಚೇತನ ಸಂಸ್ಥೆಗೆ (ಡಿ. 4) ಭೇಟಿ ನೀಡಿದ್ದರು. 2024ರ ಜನವರಿ 6 ಹಾಗೂ 7 ರಂದು ಬೆಂಗಳೂರಿನ ಶೃಂಗೇರಿ ಶಂಕರಪುರ ಮಠದ ಆವರಣದಲ್ಲಿ ''ರಾಜ್ಯ ಮಟ್ಟದ ಮಹಿಳಾ ಸಮ್ಮೇಳನ - ಅಭಿಜಾತೆ- 2024 ''ಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸುವಂತೆ ಅದಮ್ಯ ಚೇತನ ಸಂಸ್ಥೆ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರನ್ನು ಆಮಂತ್ರಿಸಲು ಅಖಿಲ ಭಾರತ ಬ್ರಾಹ್ಮಣ ಮಹಾಸಭಾ ಸದಸ್ಯರು ಬಂದಿದ್ದರು.

**ಇತರ ಚಟುವಟಿಕೆಗಳು:** ಅದಮ್ಯ ಚೇತನ ಸಂಸ್ಥೆಯು ಭಗವದ್ಗೀತೆ ಪಠಣ, ಹಸಿರು ಭಾನುವಾರ, ಶ್ರೀ ಚೇತನ ಸಭೆ, ಶ್ರದ್ಧೆಯ ಶಿಲ್ಪ (ಆಕಾಶವಾಣಿ ಕಾರ್ಯಕ್ರಮ), ದೇಗುಲ ದರ್ಶನ, ನಿತ್ಯ ಅನ್ನದಾನ, ಪ್ಲೇಟ್ ಬ್ಯಾಂಕ್ ಮುಂತಾದ ಕಾರ್ಯಕ್ರಮಗಳು ಪ್ರತೀ ವಾರಕ್ಕೊಮ್ಮೆ ನಿಗದಿತ ದಿನದಂದು ನಿರಂತರವಾಗಿ ಮುಂದುವರಿದುಕೊಂಡು ಬಂದಿವೆ.

**"ಅದಮ್ಯ ಚೇತನ"ದಲ್ಲಿ ಜಾನಪದ ಝೇಂಕಾರ:** ಭಾರತೀಯ ಸಂಸ್ಕೃತಿ, ಪರಂಪರೆ, ಕಲೆ ಹಾಗೂ ಸಂಪ್ರದಾಯಗಳನ್ನು ಕುರಿತು ಶ್ರೀ ಅನಂತಕುಮಾರರ ಆಶಯಗಳನ್ನು ಬಿಂಬಿಸಲು "ಅದಮ್ಯ ಚೇತನ" ಹಾಗೂ "ಅನಂತಕುಮಾರ್ ಪ್ರತಿಷ್ಠಾನ" ಸಂಯುಕ್ತಾಶ್ರಯದಲ್ಲಿ ಪ್ರತಿ ತಿಂಗಳು ನಡೆಸಲು ಉದ್ದೇಶಿಸಿರುವ "ಅ-ಚಾಟ್" ಕಾರ್ಯಕ್ರಮವು 2023ರ ಡಿ. 02 ರಂದು ನಡೆದು ಈ ಸಮಾರಂಭದಲ್ಲಿ ಜಾನಪದ ಝೇಂಕಾರ ಮೊಳಗಿತು.

ಸಮುದ್ಭವ ಕಲೆ ಮತ್ತು ಸಾಂಸ್ಕೃತಿಕ ಸಂಸ್ಥೆಯ ಶ್ರೀಮತಿ ಪ್ರಿಯಾ ಗಣೇಶ್ ಅವರ ಮಾರ್ಗದರ್ಶನದಲ್ಲಿ ಕಲಾವಿದರಾದ ಅನುಷ್ಕಾ, ಅದಿತಿ, ಸಾನ್ನಿಧ್ಯ, ಲಹರಿ, ಶ್ರಾವ್ಯ, ದಿಯಾ, ಆದ್ಯ, ಆಶಿಕಾ, ಮೌಕ್ತಿಕ, ಪ್ರಿಸಿಕಾ ಅವರನ್ನು ಒಳಗೊಂಡ ತಂಡದ ಮಕ್ಕಳು ಜಾನಪದ ಗೀತಗಾಯನ ನಡೆಸಿಕೊಟ್ಟರು. ಪ್ರತಿ ಗಾಯನಕ್ಕೂ ಸಂಯೋಜಿಸಿದ ನೃತ್ಯ ಗಮನ ಸೆಳೆಯಿತು.

ಕವಿ, ಡಿ ಎಸ್ ಕರ್ಕಿಯವರ ಜನಪ್ರಿಯ 'ಹಚ್ಚೇವು ಕನ್ನಡದ ದೀಪ' ಗೀತೆಗೆ ನೃತ್ಯವನ್ನು ಸಂಯೋಜಿಸಿದ ಪ್ರದರ್ಶನ ಹಾಗೂ ಜಾನಪದ ಗೀತೆಗಳ ಸೊಗಡು ಪ್ರೇಕ್ಷಕರನ್ನು ಸಮ್ಮೋಹನಗೊಳಿಸಿದವು. ಜಾನಪದ ಗೀತಗಾಯಕಿ ಶ್ರೀಮತಿ ಶ್ರೀದೇವಿ ಗರ್ತಿಕೆರೆ ಅವರು ಶರಣ ಬಸವಣ್ಣನವರ "ನಡೆ ಚಿನ್ನ ...ನುಡಿ ಚೆನ್ನ" ವಚನ ಹಾಗೂ ಜಾನಪದ ಸಂಸ್ಕೃತಿಯನ್ನು ಬಿಂಬಿಸುವ ಗೀತೆಗಳನ್ನು ಮನದುಂಬಿ ಹಾಡಿದ್ದು, ಪ್ರೇಕ್ಷಕರಿಗೆ ಮುದ ನೀಡಿತು. ಯೋಗ ಗುರು ಡಾ. ಎಸ್. ರಾಘವೇಂದ್ರ ಪ್ರಸಾದ್ ಅವರು ಮುದ್ರೆಗಳ ಕುರಿತು ಮಾಹಿತಿ ಹಾಗೂ ಪ್ರಾತ್ಯಕ್ಷಿಕೆಯನ್ನು ನೀಡಿದರು.

ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮಾತನಾಡಿದರು, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ.ವಿ. ಕೃಷ್ಣಭಟ್ಟ ಅಧ್ಯಕ್ಷತೆ ವಹಿಸಿದ್ದರು.



## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ನವೆಂಬರ್ ತಿಂಗಳಲ್ಲಿ ವಿತರಣೆಯಾದ ಊಟದ ಅಂದಾಜು ಸಂಖ್ಯೆ | ಈವರೆಗೂ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ (ಮ. 2.00 ರಿಂದ 3.00) | 4,500 | 1,70,250 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ (ಮ.12.30 ರಿಂದ 1.30) | 3,000 | 1,11,600 |
| 3 | ನಗರ್ತರಪೇಟೆ ನಗರೇಶ್ವರ ದೇವಸ್ಥಾನ (ಮ.12.30 ರಿಂದ 1.30) | 3,000 | 92, 800 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ, ಹಲಸೂರು ಕೆರೆ ಪಕ್ಕ, ಬೆಂಗಳೂರು (ಮ.12.30 ರಿಂದ 1.30) | 4,500 | 50,700 |
| 5 | ಅನಂತ ಪ್ರೇರಣಾ ಕೇಂದ್ರ ಸೌಂತ್ ಎಂಡ್ ವೃತ್ತ (ಮ. 12.45 ರಿಂದ 2.00) (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) | 260 | 19,600 |
| 6 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರದ ಎದುರು (ಮ. 12:30 ರಿಂದ 1:30) | 4,950 | 4,950 |
| | **ಒಟ್ಟು ಅಂದಾಜು** | **20,710** | **4,49,900** |

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಅಂಚೆ ಇಲಾಖೆಯ ಬೆಂಗಳೂರು ದಕ್ಷಿಣ ವಿಭಾಗೀಯ ಮಾರುಕಟ್ಟೆ ಕಾರ್ಯನಿರ್ವಾಹಕ ಎಸ್. ಸೋಮಶೇಖರ್ ಅವರು 2023ರ ಡಿ.1ರಂದು ಅದಮ್ಯ ಚೇತನ ಅಡುಗೆ ಮನೆಗೆ ಭೇಟಿ ನೀಡಿದ ಸಂದರ್ಭ.



ಬೆಂಗಳೂರಿನ ಹೊಸಕೆರೆಹಳ್ಳಿಯ ಸ. ಹಿ. ಪ್ರಾ. ಶಾಲೆಯ ವಿದ್ಯಾರ್ಥಿ - ವಿದ್ಯಾರ್ಥಿನಿಯರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ, ಅನಂತಕುಮಾರರ ಚಿತ್ರಪ್ರದರ್ಶಿನಿ ಹಾಗೂ ಕಿರುಚಿತ್ರಗಳನ್ನು ವೀಕ್ಷಿಸಿದರು. ಭಾರತೀಯ ಸಂಸ್ಕೃತಿ-ಪರಂಪರೆ ಉಳಿಸಲು ತಾವೂ ಸಹ ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ಸಂಕಲ್ಪ ತೊಟ್ಟರು.



ರಾಷ್ಟ್ರೋತ್ಥಾನ ಪರಿಷತ್ತಿನ ಕಾರ್ಯದರ್ಶಿ ಶ್ರೀ ದಿನೇಶ್ ಹೆಗಡೆ ಅವರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭ.



ಬೆಂಗಳೂರಿನ ಬನಶಂಕರಿ ವ್ಯಾಪ್ತಿಯ ಸಾರಕ್ಕಿಯ ಕರ್ನಾಟಕ ಪಬ್ಲಿಕ್ ಸ್ಕೂಲಿನ ವಿದ್ಯಾರ್ಥಿಗಳು ಹಾಗೂ ಶಿಕ್ಷಕಿಯರು ಗವಿಪುರದ ಅದಮ್ಯ ಚೇತನಕ್ಕೆ ಭೇಟಿ (ಡಿ. 8ರಂದು) ನೀಡಿದರು. ಹಿರಿಯರಾದ ಪ್ರತಿಭಾ ಓಕ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಗೆ ಬುಕ್‌ಮಾರ್ಕ್‌ಗಳು, ಅನಂತಕಿರಣ ಪುಸ್ತಕ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಲಾಯಿತು



ಅದಮ್ಯ ಚೇತನ ಸಂಸ್ಥೆಯ ವತಿಯಿಂದ ಲಾಲ್ ಬಾಗ್ ಪಶ್ಚಿಮ ದ್ವಾರದ ಬಳಿಯ ಅನಂತಸ್ಮೃತಿ ವನದಲ್ಲಿ ನಿತ್ಯ ಅನ್ನದಾನದ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.



ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯ ಮಾರಗೊಂಡನಹಳ್ಳಿ ಕೆರೆಯ ಬದಿಯಲ್ಲಿ ನಡೆದ 415ನೇ ಹಸಿರು ಭಾನುವಾರದಲ್ಲಿ ಐಐಟಿ ಕಾನ್ಪುರದ ಸುಜೀತ್‌ಕುಮಾರ್, ಐಐಎಫ್ ಸಂಸ್ಥೆಯ ಎಂ ವೆಂಕಟೇಶ್, ಸೊಸೈಟಿ ಜನರಾಲ್ ಮತ್ತಿತರು ಪಾಲ್ಗೊಂಡಿದ್ದರು.

## ಅನಂತ ಚಿತ್ರಸಂಪುಟ

**ದಿವಂಗತ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರ ಜನ್ಮದಿನದ ಸ್ಮರಣೆಯಲ್ಲಿ ವಿಶೇಷ ಚಿತ್ರಸಂಪುಟವಿದು. ಅಟಲ್ ಮತ್ತು ಅನಂತ್ - ಇಬ್ಬರೂ ಅಜಾತಶತ್ರುಗಳು: ತಮ್ಮ ಜೀವಮಾನದಲ್ಲಿ ಸಭ್ಯ ರಾಜಕಾರಣದ ಅಪೂರ್ವ ಮಾದರಿಗಳೆನಿಸಿಕೊಂಡಿದ್ದವರು.**











